ನರೇಗಲ್ಲ

ಹಾನಗಲ್ ತಾಲ್ಲೋಕಿನ ನರೇಗಲ್ಲದಲ್ಲಿ ಅತ್ಯಂತ ಶಿಥಿಲವಾಗಿರುವ ಮಣ್ಣು ಬಸಪ್ಪ ದೇವಾಲಯದ ಮಂಟಪದಲ್ಲಿನ ಬಸವಣ್ಣ ವಿಗ್ರಹದ ಬಳಿ ನೇರ ನಿಲುವಿನ ಸೀಳುಗೊಂಡಿರುವ ತೀರ್ಥಂಕರನ ಮೂರ್ತಿಯೊಂದು ಮುರುಟಿಗೊಂಡು ಬಿದ್ದಿದ್ದು ಕಣ್ಣೀರು ಮಿಡಿಯುವಂತಾಗಿದೆ.

ಆಡೂರು ( ಹಾನಗಲ್ಲು )

ಇಲ್ಲಿ ಧರ್ಮಗಾಮುಣ್ಡನು ಕ್ರಿಶ್. ೭೫೦ ಜಿನಾಲಯವನ್ನು ಕಟಿಸಿದನು.

ಮುತ್ತಗಿ

ಕಲಘಟಗಿ ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಮೂರು ವರುಷಗಳ ಹಿಂದೆ ಭೂ ಅಗೆತದಲ್ಲಿ ಎರಡು ಸುಂದರ ಕಾರ್ಯೋತ್ಸರ್ಗ ಜಿನಮೂರುತಿಗಳು ಲಭ್ಯವಾಗಿವೆ. ಅಂತೆಯೇ ಹುಬ್ಬಳ್ಳಿಯ ಧರ್ಮಬೀರು ದಿ॥ ಆರ್.ಬಿ. ಅಂಗಡಿಯವರ್ ಧರ್ಮಪತ್ನಿ ಶ್ರೀಮತಿ ರೇಣುಕಾಬಾಯಿ ರಾ. ಅಂಗಡಿಯವರು ಗ್ರಾಮದ ಮುಂದೆ ಚೊಕ್ಕನಾದ ಗುಡಿಯೊಂದನ್ನು ನಿರ್ಮಿಸಿ ೩ ಅಡಿಗಳೆತ್ತರದ ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರ ವಿಗ್ರಹವನ್ನು ೧೨–೬–೧೯೮೪ ರಂದು ಪ್ರತಿಷ್ಠಾಪಿಸಿರುವರು. ಇಲ್ಲಿನ ಚೌವ್ವೀಸ ತೀರ್ಥಂಕರರ ಹಿತ್ತಾಳೆ ಬಿಂಬವು ಆಕರ್ಷಕವಾಗಿದೆ. ಮಂದಿರದ ಕಾಷ್ಠದ ಬಾಗಿಲು ಕುಸುರಿಗೆಲಸದ ಚಿತ್ತಾರವನ್ನೊಂದಿದೆ.

ಶಿರೂರ

ಪಂಪ ಮಹಾಕವಿಯ ತಿರುಳ್ಗನ್ನಡನಾಡಾದ ಲಕ್ಷ್ಮೇಶ್ವರ ಮತ್ತು ಸವಾಯಿಗಂಧರ್ವರ ಕುಂದಗೋಳದ ನಡುವೆ ಇರುವ ಶಿರೂರ ಗ್ರಾಮವು ಪ್ರಾಚೀನ ಜೈನ ತಾಣಗಳಲ್ಲೊಂದಾಗಿದ್ದಿತು. ೧೨ ನೆಯ ಶತಮಾನದಲ್ಲಿ ಯಾಪನೀಯ ಸಂಘ ವೃಕ್ಷಮೂಲಗಣದ ಕುಸುಮ ಜಿನಾಲಯವು ಕಾಳಿಶೆಟ್ಟಿಯೆಂಬ ಜಿನಭಕ್ತನೋರ್ವನಿಂದ ನಿರ್ಮಾಣಗೊಂಡಿದ್ದುದಾಗಿ ಮತ್ತು ಶ್ರೀ ಪಾರ್ಶ್ವನಾಥ ಭಟ್ಟಾರಕರಿಂದ ಜಿನಮೂರ್ತಿಯು ಸಮರ್ಪಿತವಾಗಿ ಧರ್ಮಪ್ರಭಾವನೆಗೈದುದಾಗಿಯೂ ಶಿಲಾಲೇಖದಿಂದ ಶ್ರುತಪಟ್ಟಿದೆ. ಆದರೆ ಈ ಚೈತ್ಯಾಲಯವು ನಾಮಾವೇಷವಾಗಲು ಕರಿ ಕಲ್ಲಿನ ಸುಮಾರು ೩ ಆಡಿಗಳೆತ್ತರದ ಚತುರ್ವಿಂಶತಿ ತೀರ್ಥಂಕರರು ಹಾಗೂ ಪಂಚಪಣಿ ಶ್ರೀ ಪಾರ್ಶ್ವನಾಥ ಕಾರ್ಯೋತ್ಸರ್ಗ ವಿಗ್ರಹಗಳನ್ನು ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆಯ ಪ್ರವೇಶಾಂಗಣದ ಬಲ ಮತ್ತು ಎಡಗೋಡೆಗಳಲ್ಲಿ ಅಳವಡಿಸಲಾಗಿದೆ.

ಕಮಡೊಳ್ಳಿ

ಶಿರೂರ ಬಳಿಯ ಕಮಡೊಳ್ಳಿಯಲ್ಲಿನ ಪಿ.ಜಿ. ಕುರ್ತಕೋಟಿಯವರ ಹೊಲದಲ್ಲಿ ತುಸು ಹುದುಗಿರುವ ೩ ಅಡಿಗಳೆತ್ತರದ ಸರ್ಪದಡೆಗಳು ಭಿನ್ನ ವಾಗಿರುವ ಕಾರ್ಯೋತ್ಸರ್ಗಿ ಶ್ರೀ ಪಾರ್ಶ್ವನಾಥ ವಿಗ್ರಹವು ಏಕಾಂಗಿಯಾಗಿರುವುದನ್ನು ಕಾಣಬಹುದು ಬರಿದಾಗಿ ನಿಂತಿರುವ ಈ ಮೂರುತಿಯ ಉಗಮವು ತಿಳಿಯದಾಗಿದೆ.

ಭುಳ್ಳಪ್ಪನ ಕೊಪ್ಪ

ಕಮಡೊಳ್ಳಿ ಸಹನಿಯದ ಭು. ತರ್ಲಘಟ್ಟ ಮತ್ತು ನೆಲಗುಡ್ಡ ಗ್ರಾಮಗಳಿಗೆ ಹೊಂದಿಕೊಂಡಿರುವ ಕೊಪ್ಪದಲ್ಲಿ ಕಿರಿದಾದ ಮಣ್ಣು ಗೋಡೆಯ ಗುಡಿಯಲ್ಲಿ ಭಿನ್ನ ವಾಗಿರುವ ಅಡಿಗಳೆತ್ತರದ ಖಡ್ಗಾಸನಿ ಶ್ರೀ ಪಾರ್ಶ್ವನಾಥ ತಿರ್ಥಂಕರನ ಮೂಲಮೂರ್ತಿಯಿದೆ. ಶಿಲೆಯ ಸಣ್ಣ ಗಾತ್ರದ ಶ್ರೀ ಮಹಾವೀರ, ಶ್ರೀ ಶಾಂತಿನಾಥ, ಲೋಹದ ಹಾಗೂ ಶ್ರೀ ಪದ್ಮಾವತಿ ದೇವಿಯ ಬಿಂಬಗಳು ಅರ್ಚನೆಗೊಳ್ಳುತ್ತಲಿವೆ.

ನಾಡಿನ ಉದ್ದಗಲಕ್ಕೂ ಸಂಚರಿಸಿದಾಗ ಕಾಣಸಿಗುವ ಅಸಂಖ್ಯಾತ ಜಿನ ಚೈತ್ಯಾಲಯಗಳು ಜಿನಶಾಸನಗಳು ಹಾಗೂ ಜಿನಮೂರ್ತಿಗಳು ಅಂದಿನ ಧಾರ್ಮಿಕ ಉತ್ಕರ್ಷೆಯನ್ನು ಕುರಿತು ಅಭಿಮಾನ, ಆನಂದಾತೀರೇಕಗಳನ್ನು ಉಂಟು ಮಾಡಿ ಮೈನವಿರೇಳಿಸುವಂತಾದರೂ ಕಾಲನಿಯಮವೋ ಎಂಬಂತೆ ಸೂಕ್ತ ಮುತುವರ್ಜಿ, ಅಸ್ಥೆ ಮತ್ತು ರಕ್ಷಣೆಯ ಕೊರತೆಯಿಂದಾಗಿ ಜೀರ್ಣಾವಸ್ಥೆಯ ಅಂಚಿನಡೆಗೆ ಸಾಗುತ್ತಿರುವುದನ್ನು ಕಂಡು ಮನಮಿಡಿಯುತ್ತದೆ, ಹೃದಯ ಭಾರವಾಗುತ್ತದೆ. ಸಂಪೂಜಿತವಾಗಬೇಕಾಗಿರುವ ಜಿನಮಣಿಗಳು ಧಾರ್ಮಿಕ ಪ್ರಾದುರ್ಭಾವವಿಹಿತವಾಗಿ ಅಗೋಚರ ಲಂಟಾನ ಪೊದೆಗಳಲ್ಲಿ ಮತ್ತು ಕೆರೆಕಟ್ಟೆ ಬಾವಿಗಳ ಸಂದಿಗೊಂದಿಗಳಲ್ಲಿ ಅಡಗಿ ಗತಿಸಿದ ಇತಿಹಾಸ ಪರಂಪರೆಯ ತುಣುಕುಗಳಾಗಿ ಉಳಿದಿರುವುದು ಅತ್ಯಂತ ಖೇದಕರವಾದುದು. ಆಧುನಿಕತೆಯ ಯಾಂತ್ರಿಕ ಬದುಕು ಹಾಗೂ ಕಾರ್ಯ ಭಾರದ ನಡುವೆಯೂ ಇಂತಹ ಅನರ್ಘ್ಯ ಧಾರ್ಮಿಕ ದಾಖಲೆ ಪುರಾವೆಗಳತ್ತ ಸಮಯೋಚಿತ ಲಕ್ಷ್ಯವಿತ್ತು ರಕ್ಷಿಸುವುದು ಸರ್ವಧರ್ಮೀಯರ ಹಾಗೂ ಕಲೋಪಾಸಕರ ನಿರಂತರ ಕರ್ತವ್ಯವಾಗಬೇಕು.

ಜೈನ ಧರ್ಮೀಯರ ಸಂಖ್ಯೆಯು ಇಂದಿಗೂ ಹೆಚ್ಚಿ ಗೆ ಇರುವ ಧಾರವಾಡ ಜಿಲ್ಲೆಯು ಪ್ರಚೀನ ಕಾಲದಿಂದಲೂ ಪ್ರಬಲ ಜೈನ ನೆಲೆಯಾಗಿದ್ದಿತು. ಇಂದಿಗೂ ಪ್ರಾಚೀನ ಜೈನ ಧರ್ಮದ ವೈಭವವನ್ನು ಸಾರಿ ಹೇಳುವ ಬಸದಿಗಳು, ಬಸದಿಗಳ ಅವಶೇಷಗಳು, ಶಾಸನಗಳು ಮತ್ತು ಮಣ್ಣು ಪಾಲಾಗಿರುವ ಮೂರ್ತಿಗಳು ಕಾಣುತ್ತವೆ. ಕೆಲವು ಸ್ಥಳಗಳಿಗೆ ಭೇಟಿಯಿತ್ತಾಗ ಕಂಡು ಬಂದ ಮನಮಿಡಿಯುವ ದೃಶ್ಯಗಳು

ಕಣ್ಣಲ್ಲಿ ನೀರೂರಿಸುತ್ತವೆ. ಸಮಾಜ ಜಾಗೃತವಾದರೆ ಈಗಲೂ ಹಲವಾರು ಸ್ಮಾರಕಗಳನ್ನು ಉಳಿಸಿಕೊಳ್ಳಬಹುದೆಂದು ನನ್ನ ಅನಿಸಿಕೆಯಾಗಿದೆ.

ಹೀಗೆ ಅಗಣಿತ ಪಾವನನೆಲೆಗಳು ಜೈನ ಧರ್ಮದ ಉಚ್ಛ್ರಾಯ ಸ್ಥಿತಿಗತಿಗಳನ್ನರಿಯಲು ಅತ್ಯಂತ ಸಹಾಯಕವಾಗಿದೆ.

ಗೊಮ್ಮಟ ವಾಣಿ : ೧೫-೭-೧೯೮೨, ೧೫-೮-೧೯೮೨, ೧-೭-೧೯೮೪,

೧-೭-೧೯೮೬, ೧-೪-೧೯೮೯.

ವಿದೇಶಗಳಲ್ಲಿ ಜೈನಧರ್ಮ

ವಿಶ್ವ ಧರ್ಮವೆಂದು ಉದ್ಘೋಷಿತವಾದ ಪ್ರಮುಖ ಭಾರತೀಯ ಧರ್ಮಗಳಲ್ಲೊಂದಾದ ಅತ್ಯಂತ ಪ್ರಾಚೀನತಮವಾದ ಹುಟ್ಟನ್ನು ಪಡೆದುದಾಗಿದೆ. ತನ್ನ ಉತ್ತರ ಸಮಕಾಲೀನ ಧರ್ಮವಾದ ಬೌದ್ಧ ಧರ್ಮದಂತೆ ಜೈನ ಸಾಹಿತ್ಯ ಮತ್ತು ವಾಸ್ತು ಶಿಲ್ಪವು ಭಾರತದ ಗಡಿಗಳಾಚೆ ಪಸರಿಸದೆ ಇಲ್ಲಿಯೇ ಪ್ರಾದುರ್ಭಾವವನ್ನು ಕಂಡುಕೊಂಡುದು ಒಂದು ವಾಸ್ತವ ಸಂಗತಿಯಾಗಿದೆ. ಬೌದ್ಧ ಧರ್ಮವಾದರೂ ಹುಟ್ಟಿದ ನೆಲದಲ್ಲಿ ತನ್ನ ನೆಲೆಯನ್ನು ಕಳೆದುಕೊಂಡು ವಿಶ್ವದ ಇತರೆಡೆ ಹರಡಿಕೊಂಡು ಬೇರೂರಿ ದಟ್ಟವಾದ ಪರಿವರ್ತಿತವಾಗಿ ಮೆರೆಯುತ್ತಿರುವುದು ಗಮನಾರ್ಹವಾದುದು. ಆದಾಗ್ಯೂ ವ್ಯಾಪ್ತಿಯಲ್ಲಿ ಜೈನಧರ್ಮವು ಭಾರತ ದೇಶಕ್ಕೆ ಸೀಮಿತಗೊಂಡಿದ್ದರು ಇತಿಹಾಸದ ಹಾಳೆಗಳನ್ನು ತಾಳೆ ಹಾಕಿದಾಗ ಅದು ಕೆಲವು ವಿದೇಶಿ ಸ್ಥಳಗಳಲ್ಲಿ ತನ್ನ ಕುರುಹುಗಳನ್ನು ಅಚ್ಚೊತ್ತಿರುವುದು ಕಂಡು ಬರುತ್ತದೆ.

ದಕ್ಷಿಣ ಇಂಡಿಯಾದ ಸನಿಹದಲ್ಲಿಹ ಶ್ರೀಲಂಕಾ ದ್ವೀಪದ ಯಾತ್ರಾಸ್ಥಳವಾದ ಅನುರಾಧಪುರವು ಬೌದ್ಧಮತದ ಮುಖ್ಯ ಕೇಂದ್ರವಾಗಿದ್ದಂತೆ ಜೈನ ಧರ್ಮ ಕ್ಷೇತ್ರವೂ ಆಗಿದ್ದಿತೆಂದು ಮತ್ತು ಅನೇಕ ಬೌದ್ಧ ವಿಹಾರಗಳೊಂದಿಗೆ ಜೈನ ಬಸದಿಗಳು ನಿರ್ಮಾಣಗೊಂಡಿದ್ದುವೆಂತಲೂ ತಿಳಿದು ಬರುತ್ತದೆ. ಆದರೆ ಅವುಗಳ ಅಸ್ತಿತ್ವದ ಬೌತಿಕ ಕುರುಹುಗಳು ಕಾಣದಿರುವುದು ಶೋಚನೀಯವಾದುದು. ಉತ್ತರ ಇಂಡಿಯಾಕ್ಕೆ ಹೊಂದಿಕೊಂಡಿರುವ ನೇಪಾಳದ ಜನಕಪುರಿ ( ಮಿಥಿಲಾನಗರಿ ) ಯು ಭಗವಾನ ಶ್ರೀ ನೇಮಿನಾಥ ಮತ್ತು ಶ್ರೀ ಮಲ್ಲಿನಾಥ ತೀರ್ಥಂಕರರ ಜನ್ಮ ಸ್ಥಳವಾಗಿದ್ದುದರಿಂದ ಜೈನ ಧರ್ಮವು ಅಲ್ಲಿಯೂ ತನ್ನ ಪ್ರಬಲತೆಯನ್ನು ಹೊಂದಿದ್ದಿರಬಹುದೆನ್ನಲಾಗಿದೆ. ಇತ್ತೀಚಿಗೆ ನೇಪಾಳ ಜೈನ ಸಮಾಜದ ಮುಖಂಡರಾದ ಶ್ರೀ ಉಲ್ಲಾಷ ಚಂದ್ರ ಗೋಲ್ಚಾರವರು ಅಲ್ಲಿನ ಜೈನ ಕ್ಷೇತ್ರಗಳ ಅಭಿವೃಧ್ಧಿಗಾಗಿ ಭಾರತ ವರ್ಷೀಯ

ದಿಗಂಬರ ಜೈನ ಮಹಾಸಮಿತಿ ಮತ್ತು ತೀರ್ಥ ಕ್ಷೇತ್ರ ಕಮಿಟಿ ಜೈನ ಪರಿಷತ್‌ಗಳನ್ನು ಸಂಪರ್ಕಿಸಿ ಸಹಕಾರ ಮತ್ತು ಸಹಯೋಗಕ್ಕಾಗಿ ಆಶಿಸಿದುದನ್ನು ನೆನೆಯಬಹುದು.

ಒರಿಸ್ಸಾದ ರಾಜ್ಯ ಪಾಲರಾಗಿದ್ದ ಶ್ರೀ ವಿಸ್ವಂಭರನಾಥ ಪಾಂಡ್ಯಾರವರು ಉಲ್ಲೇಖಿಸಿರುವಂತೆ ರಶ್ಯಾದ ಲಿನೀನ್‌ಗಾರ್ಡ್ ಮತ್ತು ತಾಷ್ಕೆಂಟ ಪ್ರದೇಶಗಳಲ್ಲಿ ಹಲವಾರು ಶತಮಾನಗಳ ಹಿಂದೆಯೇ ಜೈನ ಧರ್ಮದ ಐತಿಹ್ಯವನ್ನು ಗುರುಹಿಸಲಾಗಿದೆ. ಮುನಿಮಣಿಭದ್ರನೆಂಬ ಜೈನಸಾಧುವು ತಾಷ್ಕೆಂತ ನಗರಕ್ಕೆ ಭೇಟಿ ನೀಡಿದ್ದುಂಟು. ಇತ್ತೀಚಿಗೆ ಸೋಮಿಯತ್ ದೇಶದ ಕ್ಯಾಸ್ಪಿಯನ್ ಸಮುದ್ರ ತೀರಕ್ಕೆ ಹೊಂದಿಕೊಂಡಿರುವ ಅಸ್ತ್ರಾ ಕಾನ್ ಎಂಬಲ್ಲಿ ನಿವಾಸಿಯೋರ್ವನು ಭೂ ಅಗೆತದಲ್ಲಿ ತೊಡಗಿದ್ದಾಗ ೧೬ – ೧೭ ನೆಯ ಶತಮಾನಡ ಕಂಚಿನ ಪದ್ಮಾಸನಿ ಜಿನಮೂರ್ತಿಯೊಂದು ಪತ್ತೆಯಾಗಿರುವುದಾಗಿ ವರದಿಯಾಗಿದೆ. ಬಹುಶಃ ರೋಸ್ತೋವ್ ಮತ್ತು ಅಸ್ತ್ರಕಾನ್‌ದಲ್ಲಿ ನೆಲೆಸಿದ್ದ ಜೈನ ವರ್ತಕರಿಂದಾಗಿ ಅದು ಅಲ್ಲಿಗೆ ತಲುಪಿರಬಹುದೆನ್ನಲಾಗಿದೆ. ಡಿಕೋರ್ಬಾಸೀ ಎಂಬ ೧೮ ನೆಯ ಶತಮಾನ ಮೂಲದ ರಷ್ಯಾದ ಬುಡಕಟ್ಟಿನ ಪ್ರಸಿದ್ಧ ಜನಾಂಗವೊಂದು ಪೂರ್ಣ ಶಾಂತಿ ಮತ್ತು ಅಹಿಂಸಾವಾದಿಗಳೆಂದು ಹೆಸರಾಗಿ ಜೈನ ಧರ್ಮ ತತ್ವಾನುಷ್ಠಾನದಲ್ಲಿ ತೊಡಗಿದ್ದುದು ಉಂಟು. ಅವರು ಸಸ್ಯಹಾರಿ ಮತ್ತು ಸನ್ಯಾಸತ್ಯಾಗ ಜೀವನವನ್ನು ಅಬುಸರಿಸುವವರಾಗಿದ್ದರು. ಅವರು ಪ್ರಾಣಿ ಹಿಂಸೆ ಮತ್ತು ಮಾಂಸಭಕ್ಷಣೆಯ ಪಾಪಕರವೆಂದು ಬಗೆದರು. ದನಗಳನ್ನು ಕಾಡಿಗಟ್ಟಿ ನೇಗಿಲಿಗೆ ತಮ್ಮ ಹೆಗಲನ್ನು ಕೊಟ್ಟು ಭೂಮಿಯನ್ನು ಉಳುವುದರ ಮೂಲಕ ಅಹಿಂಸಾವ್ರತವನ್ನು ಪರಿಪಾಲಿಸುತ್ತಿದ್ದರು. ಲಿಬಿಯಾ ಮತ್ತು ಸಿರಿಯಾದಂತಹ ಅರಬ್ ರಾಷ್ಟ್ರಗಳು ಮತ್ತು ಡೆನ್‌ಮಾರ್ಕ್ ಹಾಗೂ ಇತರೇ ಸ್ಕಾಂಡಿನೇವಿಯನ್ ದೇಶಗಳಲ್ಲಿ ಹಲವಾರು ನಿವಾಸಿಗಳು ಮಾಂಸಾಹಾರವನ್ನು ವಿರೋಧಿಸಿ ಹಾಗೂ ತ್ಯಜಿಸಿ ಸಸ್ಯಾಹಾರಿಗಳಾಗಿರುವುದು ಗಮನಾರ್ಹ. ಈಜಿಪ್ತ್ – ಬಬಲಾನ್, ಅಲೆಕ್ಸಾಂಡ್ರಿಯ ಮತ್ತು ಗ್ರೀಕ್ ಪ್ರದೇಶಗಳಲ್ಲಿಯೂ ಜೈನರಿದ್ದರೆಂದು ಹೇಳಲಾಗಿದೆ.

ಜೈನ ಸಾಹಿತ್ಯ ದರ್ಶನ

ಸುಮಾರು ಎರಡು ಶತಮಾನಗಳಿಂದಿಚೀಗೆ ಜೈನ ಧಾರ್ಮಿಕ ಸಾಹಿತ್ಯವು ಪಾಶ್ಚಿನಾತ್ಯ ಹಾಗೂ ಪೂರ್ವಾತ್ಯ ವಿದ್ವಾಂಸರು ಮತ್ತು ಮೀಮಾಂಸಕರನ್ನು ತನ್ನೆಡೆಗೆ ಸೆಳೆದುಕೊಂಡು ಅಹಿಂಸಾಜ್ಯೋತಿಯನ್ನು ಜಗತ್ತಿನಾದ್ಯಂತ ಪಸರಿಸುತ್ತಿರುವುದು ಗಮನಿಸತ್ತಕ್ಕದು. ಇಂಡಿಯಾದ ವೈದಿಕ ಸಾಹಿತ್ಯವು ಜರ್ಮನೀಕರಗೊಂಡ ಅವಧಿಯಲ್ಲಿಯೇ ಜೈನ ಸಾಹಿತ್ಯವು ಜರ್ಮನ್ ಭಾಷೆಯಲ್ಲಿ ಭಾಷಾಂತರಗೊಂಡವು ಎನ್ನಲಾಗಿದೆ. ಮಹಾನ್ ವಿದ್ವಾಂಸರಾದ ಡಾ. ರಾಯನಾಯಡೆಯವರು ವ್ಯಕ್ತಪಡಿಸಿರುವಂತೆ ಜೈನ

ಧರ್ಮದ ಅಧ್ಯಯನವು ಜರ್ಮನೀಯರನ್ನು ವಿಶೇಷ ಆಸಕ್ತಿಯಿಂದ ಗಮನಸೆಳೆದು ಜರ್ಮನಿಯಲ್ಲಿ ೧೯೬೧ ರಲ್ಲಿ ಯೇ ಜೈನ ಪೀಠವು ಪ್ರಾರಂಭಗೊಂಡಿದ್ದು ಪ್ರಸ್ತುತ ೧೭ ಜೈನ ಪೀಠಗಳು ಅಲ್ಲಿವೆ. ಶ್ರೀಮದ್ ಭಗವತ್ಕುಂಡ ಕುಂದಾಚಾರ್ಯ ದೇವ ವಿರಚಿತ ' ಸಮಯಸಾರ ' ಮೊದಲಾದ ಜೈನ ಧಾರ್ಮಿಕ ಗ್ರಂಥಗಳ ಪರಿಚಯವು ಜರ್ಮನ್ ವಿದ್ವಾಂಸರಿಗೆ ಇದೆ. ಇಂತಹ ಅಭಿಮಾನದ್ಯೋತಕವಾದ ಕ್ರಿಯೆಯು ಇತರ ಪಾಶ್ಚಿಮಾತ್ಯ ಭಾಷೆಗಳಲ್ಲಿಯೂ ಹಬ್ಬುಟ್ಟಿದೆ. ಹೀಬ್ರೋ ಭಾಷೆಯಲ್ಲಿನ ಒಂದು ಶಾಸನದಲ್ಲಿ ೧೦೦೦ ಮುನಿಗಳು ಮತ್ತು ೧೦೦೦ ಅಜ್ಜಿಕೆಯರ ಕುರಿತು ಉಲ್ಲೇಖವಿರುವುದು.

ಜೈನದರ್ಶನ, ಶಾಖಾಹಾರ, ಅಹಿಂಸೆಯ ಪ್ರಚಾರವನ್ನು ಧ್ಯೇಯವಾಗಿರಿಸಿಕೊಂಡು ಜರ್ಮನ ಭಾಷೆಯಲ್ಲಿ ಶ್ರೀ ಮಾರ್ಕೋಸ್ ಮೊಸ್ಸನರ್ ಅವರು ಜೈನ ಪಾಥ ಎಂಬ ತ್ರೈಮಾಸಿಕವನ್ನು ಸಂಪಾದಿಸಿ ಪ್ರಕಟಿಸಿರುವರು. ಕರ್ನಲ್ ಕಾಲೀನ್ ಮೇಕೆನ್ಜಿ ಎಂಬ ಮಹಾಶಯನು ಪಶ್ಚಿಮ ಹಿಂದೂಸ್ತಾನದ ಅನೇಕ ಜೈನ ಬಸದಿಗಳಲ್ಲಿದ್ದ ಗ್ರಂಥಗಳನ್ನು ಮತ್ತು ೧೭೦೦ ಶಿಲಾಲೇಖ ಮತ್ತು ತಾಮ್ರ ಶಾಸನಗಳನ್ನು ಸಂಗ್ರಹಿಸಿ ಪಾಶ್ಚಿಮಾತ್ಯರಿಗೆ ಜೈನ ಧರ್ಮದ ಪ್ರಾಧ್ಯಾನತೆಯನ್ನು ಪರಿಚಯಿಸಿದರು. ಇವು ' ಮೇಕೆನ್ಜೀ ಕಲೇಕ್ಷನ್ಸ್ ' ಎಂದು ಪ್ರಸಿದ್ಧವಾಗಿವೆ. ೧೭೭೩ ರಲ್ಲಿ ಈಹಬು ಶ್ರವಣಬೆಳ್ಗೊಳದ ಶ್ರೀ ಗೊಮ್ಮಟೇಶ್ವರ ವಿಗ್ರಹದ ಬಗ್ಗೆ ಸಂಶೋಧನ ಲೇಖನವನ್ನು ಬರೆದಿರುವನು. ಅಲ್ಲದೆ ದೇವಚಂದ್ರನ ' ರಾಜಾವಳಿ ಕಥೆ ' ಯ ರಚನೆಗೆ ಪ್ರೇರಕ ಶಕ್ತಿಯಾಗಿದ್ದನು ( ೧೮೦೪ ) ಡಾ. ಜೇಮ್ಸ್ ಫರ್ಗುಸನ್‌ರು ಕೂಡ ಶ್ರೀ ಗೋಮ್ಮಟೇಸ್ವರ ವಿಗ್ರಹವನ್ನು ಬಹಳವಾಗಿ ಪ್ರಶಂಶಿಸಿದ್ದಾರೆ. ( ೧೮೫೫ ) ಶ್ರೀ ಕೀಲ್ ಹಾರ್ನ್‌ನು ಜೈನ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನಗೈದಿದ್ದನು.

ಬರ್ಲಿನ್ ವಿಶ್ವವಿಧ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಡಾ.ಎಂ. ವಿಂಟನಿಟ್ಸರು ಬರೆದ ' ಭಾರತೀಯ ಸಾಹಿತ್ಯ ಚರಿತ್ರೆ ' ( ೧೮೮೦ ) ಯ ಮೂರು ಸಂಪುಟಗಳಲ್ಲಿ ಎರಡನೆಯ ಸಂಪುಟವು ಜೈನ ಮತ್ತು ಬೌದ್ಧ ಧರ್ಮಗಳ ಸಾಹಿತ್ಯ ಚರಿತ್ರೆಯನ್ನು ಕುರಿತ್ತದ್ದಾಗಿದೆ. ಇದು ಇಂಗ್ಲೀಷ ಬಾಷಾಂತರವಾಗಿಯೂ ಪ್ರಕಟಗೊಂಡಿದೆ. ಡಾ. ಹರ್ಮನ್ ಯಾಕೋಬಿ ( ೧೮೫೦ – ೧೯೩೭ ) ಯವರಂತೂ ಜೈನ ಧರ್ಮಗಳ ಬಗ್ಗೆ ವಿಶೇಷ ಆಸಕ್ತಿಯನ್ನು ತಳೆದಿದ್ದರು. ಅವರು ೧೮೪೯ ರಲ್ಲಿ ಭದ್ರಬಾಹಿವಿನ ಆಚಾರಾಂಗ ಮತ್ತು ಕಲ್ಪಸೂತ್ರ ( ೧೮೭೯ ) ವನ್ನು ಸಂಪಾದಿಸಿ, ೧೮೮೪ ಮತ್ತು ೧೮೯೫ ರಲ್ಲಿ ಜೈನ ಸೂತ್ರ ( ಸಂಪುಟ ೧ ಮತ್ತು ೨ ) ಗಳನ್ನು ವಿದ್ವತ್ ಪೂರ್ಣವಾಗಿ ಭಾಷಾಂತರಿಸಿದ್ದರು. ಇದು ೧೯೬೮ ರಲ್ಲಿ ಯಾವುದೇ ಪರಿಷ್ಕೃತಗೊಳ್ಳದೆ ಪುನರ್ಮುದ್ರಣ ಗೊಂಡಿತ್ತು. ಅವರು " ಮಹಾವೀರ ಮಟ್ಟು ಪೂರ್ವಜರು "

ಗ್ರಂಥವನ್ನೂ ಅನುವಾದಿಸಿದ್ದಲ್ಲದೆ ಹೇಮಚಂದ್ರಚಾರ್ಯರ " ತ್ರಿಷಷ್ಠಿ ಶಲಾಕಾಪುರುಷ ಚರಿತ್ರೆ " ( ೧೮೯೧ ) ಮತ್ತು ಅದರ " ಪರಿಶಿಷ್ಟಪರ್ವ " ( ೧೯೩೨ ) ಹಾಗೂ ವಿಮಲಸೂರಿಯ " ಪಉಮಚರಿಯ " ( ರಾಮಾಯಣ ) ( ೧೯೧೪ ) ವನ್ನು ಸಂಪಾದಿಸಿದ್ದಾರೆ. ಇವುಗಳ ಆಂಗ್ಲ ಆವೃತ್ತಿಗಳೂ ಪ್ರಕಟಗೊಂಡಿವೆ. ಅಲ್ಲದೆ ಹರಿಭದ್ರನ ' ಸಮರಾದಿತ್ಯ ಕಥೆಗಳು ' ( ೧೯೨೬) ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವರು. ಭಗವಾನ್ ಶ್ರೀ ಮಹಾವೀರನ ಶ್ವೇತಾಂಬರ ಪಂಗಡದ ಜೀವನ ವಿವರವನ್ನು ನೀಡಿದ್ದಾರೆ. ಭಾರತಕ್ಕೆ ಎರಡು ಬಾರು ಭೇಟಿ ನೀಡಿದ್ದ ಯಾಕೋಬಿಯವರನ್ನು ಜೈನ ಧರ್ಮ ಸಮ್ಮೇಳನವೊಂದರಲ್ಲಿ " ಜೈನ ಧರ್ಮ ದಿವಾಕರ " ನೆಂಬ ಪ್ರಶಸ್ತಿಯಿಂದ ಗೌರವಿಸಲಾಗಿದಿತ್ತು. ಕರ್ನಲ್ ಜೇಮ್ಸ್ ಟಾಡನು ೧೨ ನೆಯ ಶತಮಾ ನದ ಹೇಮಚಂದ್ರನ " ಕುಮಾರಪಾಲ ಚರಿತ " ವನ್ನು ( ೧೮೩೯ ) ಮತ್ತು ಇ. ಇಂಡಿಷ್‌ರು " ಯೋಗಾಶಾಸ್ತ್ರ " ವನ್ನು ( ೧೮೭೪ ) ಹಾಗೂ ೮ ನೆಯ ಶತಮಾನದ ಹರಿಭದ್ರನ " ಧರ್ಮಬಿಂದು " ವನ್ನು ಭಾಷಾಂತರಿಸಿದ್ದರು. ಯಾಕೋಬಿಯವರು ಉಮಾಸ್ವಾಮಿಯವರ ತತ್ವಾರ್ಥಾ ಧಿಗಮ ಭಾಷ್ಯ " ವನ್ನು ಅನುವಾದಿಸಿದ್ದರು. ( ೧೯೦೬ ) ಶ್ರೀಮತಿ ಸ್ಟಿವನ್‌ಸನ್ ಸಿಂಕ್ಲೇರ್ ಎಂಬುವರು **“Heart of Jainism”** ಗ್ರಂಥವನ್ನು ರಚಿಸಿದ್ದು ( ೧೯೧೫ ) ಅದು ಯಾವುದೇ ಬದಲಾವಣೆಯಿಲ್ಲದೆ ೧೯೭೦ ರಲ್ಲಿ ಪುನರ್ ಮುದ್ರಣಗೊಂಡಿತು. ಜೇಮ್ಸ್ ಫರ್ಗುಸನ್ ( ೧೮೯೧ ) ಮತ್ತು ಸ್ಮಿತ್ ವಿನ್ಸೆಂಟ್ ( ೧೯೦೧ ) ಎಂಬುವರು **Jain Iconography And Architecture** ಮತ್ತು ಜೇಮ್ಸ್ ಬರ್ಗೆಸ್(೧೯೦೩) **Digambara jaina Iconography** ಗ್ರಂಥಗಳನ್ನು ಬರೆದಿದ್ದಾರೆ.

ಹೊಯರ್ನ್ಲೆಯ ಸಲ್ಲೇಖನ ವ್ರತದ ಮಹತ್ವದ ಉಪನ್ಯಾಸಗಳು ( ೧೮೮೮ ), ಆರ್. ವಿಲಿಯಂಸನ ಜೈನ್ ಯೋಗದ ಸಾಮಾನ್ಯ ಜನರ ಶಿಸ್ತು ಸಂಯಮ ಕುರಿತಂತೆ ನಲ್ವತ್ತಕ್ಕೂ ಮಿಕ್ಕ ಜೈನ ಪಠ್ಯಗಳನ್ನು ಳ್ಳ **(Survery of Medieval Sravakacaras)** ( ೧೯೬೩ ) ಹೆಲನ್ ಎಂ. ಜಾನ್ಸನ್‌ನ ಹೇಮಚಂದ್ರನ " ತ್ರಿಶಷ್ಠಿ ಶಲಾಕಾ ಪುರುಷ ಚರಿತ " ವೆಂಬ ಶ್ವೇತಾಂಬರ ಸಂಪ್ರದಾಯ ಗ್ರಂಥ ( ೧೯೬೨ ), ಡಬ್ಲ್ಯು. ಮರ್ಸ್‌ನ ಮಲ್ಲಿಸೇನನ " ಸ್ಯಾದ್ವಾದ ಮಂಜರಿ " ಮತ್ತು ಹೇಮಚಂದ್ರನ " ಅನ್ಯಯೋಗ ವ್ಯವಚ್ಛೇದಿಕಾ " **(Recinder of other Systems)** ದ ೩೨ ಪದ್ಯಗಳ ಅನುವಾದಗಳು ( ೧೯೬೦ ) ಮಹತ್ವದ ಕೊಡುಗೆಗಳಾಗಿವೆ.

ಮಹಾವಂಶ ಬೌದ್ಧ ಕಾಲಾನುಕ್ರಮ ಇತಿಹಾಸವು ಕ್ರಿ. ಪೂ. ದಲ್ಲಿಯೇ ಸಿಲೋನಿನಲ್ಲಿ ಜೈನಧರ್ಮೀಯರಿದ್ದುದನ್ನು ಉಲ್ಲೇಖಿಸಿದೆ.

ಹೆಲ್ಮ್ ಉತ್‌ವಾನ್ ಗ್ಲಾಸೆನಪನ್ **’Der Jainismus: Eine Indishe Erlosung’s Religion’**( ೧೯೨೫ ) ಮತ್ತು **(The Doctrine of The Karma in jain philosophy** ( ೧೯೪೨ ) ಹಾಗೂ ಶುಬ್ರಿಂಗನ **`Dic Lehreder jainas’** ( ೧೯೩೪) ದ ಇಂಗ್ಲೀಷ್ ಅನುವಾದವಾದ **(The Doctrine of Tha jains )**( ೧೯೬೨ ) ಗ್ರಂಥಗಳು ಪಾಶ್ಚಿಮಾತ್ಯ ದೃಷ್ಟೀಕೋನದ ಜೈನ ಧರ್ಮ ವಿಚಾರವನ್ನೊಳಗೊಂಡಿದೆ. ಬ್ಲೂಮ್ ಫೀಲ್ಡ್ ಮೌರೀಸನ **The life and Stories of the jaina savior parsvantha**(೧೯೧೯), ಡಾ. ಜಾರ್ಜ್ ಬ್ಯೂಲ್ಹರ್‌ನ **Life of Hemachandra** ( ೧೮೮೯) ಮತ್ತು **“On the indian sect of jains”** ( ೧೯೦೩), ವಿಲಿಯಂ ಎನ್ ಬ್ರೌನ್‌ನ **The Story of kalka** ( ೧೯೩೩) **A Descriptive And llustrative catalogue of Miniature Painting of The Kalpasutra** ( ೧೯೩೪ ) ಮತ್ತು **Manuscript llustrations of the Uttardhyayana Sutra** ( ೧೯೪೧), ಬ್ರೂನ್ ಕ್ಲಾಸ್‌ನ **The jaina Images of Deogarh** ( ೧೯೬೯), ಗ್ವಾರಿನಾಟ್‌ನ **La Religion jaina** ( ೧೯೨೬), ಶ್ರೀಮತಿ ಗುಸೇವಾರ **Jainism** ( ೧೯೭೧), ಕೆಂಡಾಲ್ ಡಬ್ಲ್ಯು ಫೋಕರ್ಟ್‌ನ **`Jaina Studies: Japan, Europe, India’** ( ೧೯೨೬), ಬಿ.ಸಿ.ಲಾ ಅವರ **Some jaina Canonical Sutras** ( ೧೯೪೯), ಹೆನ್ರಿಕ್ ಜಿಮ್ಮರ್‌ನ **Philosophies of India** ( ೧೯೫೧ ), ಲೋಹುಜೆನ್ – ಡಿ ಲೀವ್ಯೂ ಮತ್ತು ಜೆ.ಇ. ವಾನ್‌ನ **The jain stupa And antiquities of Mathura (Indische Skulpture Von Dcr Sammeurg Von der Hegdt beschreibender katalog**( ೧೯೬೪), ಮ್ಯಾಥ್ಯೂ ಮೆಕೆ ಬರೆದ **Jainism For Beginner,** ವಿ. ಮೊಲ್ಹಾರ್‌ನ **Symbolic des Hinduism und des jainsimus** ( ೧೯೭೪), ಎಸ್ತರ್, ಎ. ಸಾಲೋಮಾಮ್‌ನ **Ganadharavada** ( ೧೯೬೬) ವಾಲ್ತೆರ್ ಶುಬ್ರಿಂಗನ **lsibhasiaim**( ೧೯೭೪), **Drei chedsutras des jainakanons: Ayaradasao**

**Vavahara,Nisiha'**(೧೯೬೬), **The Doctrine of the jainas** ( ೧೯೬೨) ಮತ್ತು **Worte Mahaviras** ( ೧೯೨೬), ಜೈನ ಮುನಿಗಳ ಕುರಿತಾದ ಕೋಲೆಟ್ ಕೈಲಾಟ್ ರಚಿಸಿದ **'Les Expiaions dans le riual ancient des religieux jaina'** ( ೧೯೬೫), **the religious prayacittas according to the old jaina ritual** (೧೯೬೮) ಮತು **Atonements in the Ancient Ritual of the jaina Monks** ( ೧೯೭೫), ಮ್ಯಾಕ್ಸ್‌ವೆಬರನ **The Religions of India** ಹಾಗೂ ಎಬೆರಹರ್ಡ್ ಫಿಷರ್ ಮಃಟು ಜ್ಯೋತಿಂದ್ರ ಅವರು ಸಂಯುಕ್ತವಾಗಿ ಹೊರತಂದಿರುವ **Arts and Ritual of 2500 years of Jainism in india** ( ೧೯೭೭ ) ಸಚಿತ್ರ ಹೊತ್ತಿಗೆ ಮೊದಲಾದ ಅಸಂಖ್ಯಾತ ಪ್ರಕಟನೆಗಳು ಜೈನ ಧರ್ಮದ ಸಾರಸರ್ವಸ್ವವನ್ನು ಸಾರಿ ಹೇಳುತ್ತಿವೆ.

ಸಂಶೋಧಕ ಆರ್. ನರಸಿಂಹಾಚಾರ್ಯ ' ಕನ್ನಡ ಕವಿಚರಿತ್ರೆ' ( ೧೯೦೭) ಯು ಈ.ಪಿ. ರೈಸ್ ಅವರ ಮೂಲಕ ಆಂಗ್ಲೀಕರಣಗೊಂಡ ಮೇಲೆ ಕನ್ನಡ ಜೈನ ಕವಿಗಳ ಹಿರಿಮೆಯ ಪರಿಚಯವು ವಿಸ್ತೃತವಾಗಿ ಹೊರದೇಶಗಳಿಗೆ ಉಂಟಾಯಿತು.

೧೯೮೪ ರಲ್ಲಿ ಅಮೆರಿಕದ ಡಾ. ರಾಲ್ಫ್‌ಸ್ಟ್ರೋಲ್ ಅವರು ಚಿಕಾಗೋ ವಿಶ್ವವಿದ್ಯಾಲಯದಿಂದ ಪಡೆದ ಡಾಕ್ಟರೇಟ್ ಪದವಿಗಾಗಿ " ಜೈನ ಧರ್ಮದ ನಾಯಕನ ಪ್ರತಿಮೆ : ಜಿನಸೇನರ ಅದಿಪುರಾಣದಲ್ಲಿ ವೃಷಭ, ಭರತ ಮತ್ತು ಬಾಹುಬಲಿ ಎಂಬ ಮಹಾ ಪ್ರಬಂಧವನ್ನು ಸಲ್ಲಿಸಿದ್ದರು. ಅಮೆರಿಕನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್ ಸಂಸ್ಥೆಯು ಜಿನಸೇನರ ಆದಿಪುರಾಣದ ಕೆಲವು ಭಾಗಗಳನ್ನು ಸಂಸ್ಕೃತ ಭಾಷೆಯಿಂದ ಇಂಗ್ಲಿಷಿಗೆ ತರ್ಜುಮೆ ಮಾಡಲು ಅನುದಾನವನ್ನಿತ್ತು ಗೌರವಿಸಿದ್ದಿತು. ಅಲ್ಲದೆ ಜೈನ ಧರ್ಮ ಮತ್ತು ಹಿಂದೂ ಧರ್ಮಗಳ ಮಧ್ಯಕಾಲೀನ ಪರಸ್ಪರ ಪ್ರಭಾವಗಳ ತೌಲನಿಕ ಅಧ್ಯಯನವನ್ನು ಕೈಗೊಂಡಿದ್ದಿತ್ತು. ಖ್ಯಾತ ವಿದ್ವಾಂಸ, ಜೈನ ಧರ್ಮ ನಿಧಿ ಡಾ. ಎಂ.ಡಿ. ವಸಂತರಾಜ್‌ರವರು ಮಾರ್ಗದರ್ಶನವನ್ನಿತ್ತಿದ್ದರು.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪಾಲಿ, ಬೌದ್ಧಧರ್ಮ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಕನ್ನಡಿಗ ಶ್ರೀ ಪದ್ಮನಾಭ ಎಸ್. ಜೈನಿಯವರು ತಮ್ಮ **`Sramanas: Their conflict with Brahmanical Society'** ( ೧೯೭೬), **On the sarvajnatva: (Omniscience) of Mahavira and the**

**Buddha**( ೧೯೭೪), **jaina and the western scholar** ( ೧೯೭೭) **The jaina as a Tathagata : Amrtacandras critique of Buddist Doctrine**( ೧೯೭೬), **(jaina prabha as an avatara of Vishnu** ( ೧೯೭೭), **Samakaradhukhata and the jaina concept of suffering** (೧೯೭೭) **Bhavyatva and Abhavyatva: A jain Doctrine of predestination**(೧೯೭೭) ಮತ್ತು **jain path of purification**(೧೯೭೮) ಮೊದಲಾದ ವಿದ್ವತಪೂರ್ಣ ಗ್ರಂಥರಚನೆಗಳಿಂದ ಜೈನಧರ್ಮದ ರಾಯಭರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಬಹಳಭಿಮನದ ಸಂಗತಿಯಾಗಿದೆ.

ನ್ಯೂಯಾರ್ಕನ ಕೊಲಂಬಿಯಾ ವಿಶ್ವವಿಧ್ಯಾಲಯವು ಜೈನಧರ್ಮದ ಅಧ್ಯಯನ, ಸಂಶೋದಧನೆಗೆ ಜೈನಪೀಠವನ್ನು ಸ್ಥಾಪಿಸಲು ಅನುಮತಿಯನ್ನು ನೀಡಲಾಗಿದೆ. ಅಂತಾರಾಷ್ಟ್ರೀಯ ಮಹಾವೀರ ಜೈನ ಮಿಷನನ ಟ್ರಸ್ಟಿನ ಶ್ರೀ ಮೋಟುಬಾಯಿ ಡೋಷಿಯವರು ಈ ಪೀಠದ ಸ್ಥಾಪನೆಗೆ ನೇರವಾದರು (೧೯೯೩).

ಜುಲೈ ೧೯೮೯ರಂದು ಟೊರೆಂಟೋ ನಗರದಲ್ಲಿ ನೆರೆವೇರಿದ ೫ನೆಯಜಾಗತಿಕ ಜೈನ ಸಮ್ಮೇಳನದಲ್ಲಿ ಆಚರ್ಯ ಶ್ರೀ ಕುಂದಕುಂದಾಚಾರ್ಯರ ದ್ವಿಸಹಸ್ರಬ್ದಿ ನಿಮಿತ್ತ ಪದ್ಮ ಶ್ರೀ ಸುಮತಿಬಾಯಿ ಶಹಾರವರು ಇಂಗ್ಲಿಷಭಾಷೆಯಲ್ಲಿ ಸಂಪಾದಿಸಿದ"ಪಚಾಸ್ತಿಕಾಯ" ಗ್ರಂಥವು **"The Torento star"**ಪತ್ರಿಕೆಯ ಸಂಪಾದಕರಾದ ಶ್ರೀ ಟಾಂದಾಪಯಿ ಅವರಿಂದ ಬಿಡುಗಡೆಯಾಯಿತು.

ಜೈನ ವಾಸ್ತುಶಿಲ್ಪ ಮತ್ತು ಚಿತ್ರಕಲೆ

ಚಿರಂತನ ಧಾರ್ಮಿಕ ದಾಖಲೆಗಳಾದ ಐತಿಹಾಸಿಕ ಶಿಲಾಮೂರ್ತಿಗಳು, ಶಾಸನಗಳು, ತಾಮ್ರಪಟಗಳು ಮತ್ತು ಚಿತ್ರಕಲೆ ಮುಂತಾದ ಸಾಮಗ್ರಿಗಳು ಪರದೇಶಗಳ ಸಂಪತ್ತಾದವು. ಕಾರಣಾಂತರಗಳಿಂದ ಸಾಗರೋತ್ತರವಾಗಿ ರವಾನೆಯಾದ ಕಲಾಸಂಪತ್ತು ಜೈನ ಧರ್ಮದ ಪ್ರತಿನಿಧಿಗಳಂತೆ ಅಲ್ಲಿನ ವಸ್ತು ಸಂಗ್ರಹಾಲಯಗಳನ್ನು ಅಲಂಕರಿಸಿ ಅಧ್ಯಯನಕ್ಕೆ ಎಡೆಮಾಡಿ ಕೊಟ್ಟಿವೆ.

ಸ್ವಿಡ್ಜರ್ ಲ್ಯಾಂಡ್

ಜ್ಯೂರಿಚ್‌ನ ರಿಟಬರ್ಗ್ ವಸ್ತು ಸಂಗ್ರಹಾಲಯದಲ್ಲಿ ಒಂದನೆಯ ಶತಮಾನಕ್ಕೆ ಸೇರಿದ ಕುಶಾನರ ಕಾಲದ ಮಥುರಾ ಮೂಲದ ತೀರ್ಥಂಕರನ ಪ್ರತಿಮೆ, ದಕ್ಷಿಣ ರಾಜಸ್ಥಾನದ ೧೧ – ೧೨ ನೆಯ ಶತಮಾನದ ಶ್ವೇತಾಂಬರ ಸಂಪ್ರದಾಯದ ಶೀ ವೃಷಭನಾಥ ಮತ್ತು ಜೋಧಪುರದಿಂದೊಯ್ದು ೧೯

ನೆಯ ಶ್ರತಮಾನದ ಶ್ವೇತಾಂಬರ ಗುರುವೋರ್ವನು ತನ್ನ ಗಣ್ಯ ಶ್ರೋತೃವೃಂದಕ್ಕೆ ಉಪದೇಶಿಸುತ್ತಿರುವ ಸುಂದರವಾದ ಕುಸುರಿ ಕೆತ್ತನೆಗಳು ಮನ ಸೆಳೆಯುತ್ತವೆ. ಅಂಬಿಕೆಯು ತನ್ನ ತೊಡೆಯ ಮೇಲೆ ಮಗುವೊಂದನ್ನು ಕುರಿಸಿಕೊಂಡಿರುವಂತಹ ೧೧ ನೆಯ ಶ್ರತಮಾನದ ಅಪೂರ್ವ ಕೆತ್ತನೆಯೂ ಇಲ್ಲಿ ಕಾಣಬಹುದು.

ಗುಜರಾತಿನಿಂದ ತಂದಿರಿಸಿದ ಪುಸ್ತಕದ ಹಾಳೆಗಳ ಮೇಲೆ ಚಿನ್ನ ಮತ್ತು ಬೆಳ್ಳಿಯಿಂದ ನಕಾಶಿಗೊಳಿಸಿದ ಹದಿನಾರು ಸುಂದರ ಸ್ವಪ್ನಗಳು ಮತ್ತು ಎಂಟು ಶುಭಸೂಚಕ ಚಿಹ್ನೆಗಳು, ಪಶ್ಚಿಮ ಭಾರತದ ೧೬ ನೆಯ ಶತಮಾನದ ಶ್ರೀ ಮಹಾವೀರಸ್ವಾಮಿಯ ಜೀವನ ದೃಶ್ಯಾವಳಿಗಳನ್ನು ಬಿಂಬಿಸುವ ಕಲ್ಪ ಸೂತ್ರದ ಸೂಕ್ಷ್ಮ ಚಿತ್ರಪಟುಗಳು ( ಜನ್ಮಾವರತಣ ಮತ್ತು ನಿರ್ವಾಣ ) ಮತ್ತು ಮಾತೆಯು ಶ್ರೀ ಮಹಾವೀರನ ಜನನದ ಕನಸನ್ನು ತಿಳಿಸುವ ಚಿತ್ರವನ್ನೊಳಗೊಂಡಿರುವ ಪುರಾಣವೊಂದರ ಹಸ್ತಪ್ರತಿ ಮುಂತಾದವು ಇಲ್ಲಿ ಕಾಣಸಿಗುತ್ತವೆ.

ಇವುಗಳಲ್ಲದೆ ೧೫ ನೆಯ ಶತಮಾನದ ಬೆಳ್ಳಿ ಲೇಪನದ ಸೂಕ್ಷ್ಮ ಕೆತ್ತನೆಯ ಬಾಗಿಲುವಾಡ, ಗಜದ ಮೇಲೆ ಆಸೀನವಾಗಿದ್ದು ಶಿರೋಭಾಗದ ಇಕ್ಕೆಲಗಳಲ್ಲೂ ಆನೆಗಳು ನಿಂತಿರುವ ಆಕರ್ಷಕ ಗಜಲಕ್ಷ್ಮೀಯ ಪ್ರತಿಮೆ ಮತ್ತು ಅಹಮದಾಬಾದಿನ ೧೭ ನೆಯ ಶ್ರತಮಾನಕ್ಕೆ ಸೇರಿದ ಪೌರಾಣಿಕ ಪ್ರಾಣಿಯೊಂದರ ಮೇಲೆ ನಿಂತಿರುವ ಅಲಂಕೃತ ಪ್ರತಿಮೆಯ ಮರದ ಕೆತ್ತನೆಯು ಮೋಹಕವಾಗಿವೆ.

ಭಗವಾನ್ ಶ್ರೀ ಮಹಾವೀರನ ೨೫೦೦ ನೆಯ ನಿರ್ವಾಣ ಮಹೋತ್ಸವದ ಸ್ಮರಣಾರ್ಥವಾಗಿ ೧೯೭೪ ರಂದು ಜ್ಯೂರಿಚ್‌ನಲ್ಲಿ ಜೈನ ಕಲೆ ಮತ್ತು ಸಂಸ್ಕೃತಿಯ ಕುರಿತು ಬೃಹತ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಪೂರ್ವ ಜರ್ಮನಿ

ರಾಜಧಾನಿ ಬರ್ಲಿನ್‌ನಲ್ಲಿ ಪಶ್ಚಿಮ ಮತ್ತು ದಕ್ಷಿಣ ಭಾರತದ ಕಿಶ. ೧೧೧೪ ಮತ್ತು ಮಧ್ಯೆಯುಗಕ್ಕೆ ಸೇರಿದ ಕಂಚಿನ ಚೌವ್ವೀಸ ತೀರ್ಥಂಕರರ ವಿಗ್ರಹಗಳನ್ನು ಮತ್ತು ದಕ್ಷಿಣ ಭಾರತದ ೧೩ ನೆಯ ಶ್ರತಮಾನದ ವೃಕ್ಷದಡಿಯಲ್ಲಿ ತಪಗೈಯ್ಯುತ್ತಿರುವ ತೀರ್ಥಂಕರನೋರ್ವನ ಮೂರ್ತಿಯನ್ನು ದರ್ಶಿಸಬಹುದು.

ಇಂಗ್ಲೇಂಡ

ಲಂಡನ್ನಿನ ಜಗತ್ಪಿಖ್ಯಾತ ಬ್ರಿಟಿಷ ಮತ್ತು ವಿಕ್ಟೋರಿಯಾ ಅಂಡ್ ಅಲ್ಬರ್ಟ್ ಮ್ಯೂಸಿಯಂಗಳಲ್ಲಿ ಕರ್ನಾಟಕವನ್ನಾಳಿದ ಗಂಗ, ಚಾಲುಕ್ಯ, ಮತ್ತು ಹೋಯ್ಸಳ ಸಾಮ್ರಾಜ್ಯಗಳ ಅತ್ಯಮೂಲ್ಯ ಶಿಲ್ಪ

ಕೊಡುಗೆಗಳನ್ನು ಕಾಣಬಹುದು. ಅವುಗಳಲ್ಲಿ ಲೋಹದ ಮತ್ತು ಕಪ್ಪು ಶಿಲೆಯ ಭಗವಾನ್ ಶ್ರೀ ಪಾರ್ಶ್ವನಾಥ ಮೂರ್ತಿಗಳಲ್ಲದೆ ಶ್ರೀ ಚೌವ್ವಿಸ ತೀರ್ಥಂಕರರು, ಯಕ್ಷ ಯಕ್ಷಿಯರೊಡನಿರುವ ಶ್ರೀ ಶಾಂತಿನಾಥ ಮತ್ತು ಶ್ರೀ ಚಂದ್ರ ನಾಥ ಶಿಲ್ಪಗಳು ಚಿತ್ತಾಕರ್ಷಕವಾಗಿವೆ. ೧೨ ನೆಯ ಶತಮಾನದ ಗಂಗಶೈಲಿಯ ೭ ಹೆಡೆಗಳ ನೆರಳಿನಲ್ಲಿರುವ ಶ್ರೀ ಪಾರ್ಶ್ವನಾಥ ಮತ್ತು ೧೩ ನೆಯ ಶತಮಾನದ ಚಾಲುಕ್ಯ ಶೈಲಿಯ ಪದ್ಮಾಸನ ಮೂರ್ತಿಗಳಿವೆ. ೧೧ ನೆಯ ಶತಮಾನದ ಲೋಹದ ವಿಗ್ರಹದ ಹಿಂಬದಿಯಲ್ಲಿ ಕನ್ನಡ ಶಾಸನವಿದೆ. ಸುಮಾರು ೮ ನೆಯ ಶತಮಾನದೆನ್ನಲಾದ ಭಗವಾನ್ ಶ್ರೀ ಮಹಾವೀರರು ತಮ್ಮ ಯುವರಾಜ ಅವಸ್ಥೆಯಲ್ಲಿದ್ದಾಗ ವೈಶಾಲಿಯ ರಾಜಕುಮಾರನಾಗಿ ಕಂಗೊಳಿಸುತ್ತಿದ್ದುದರ ಪ್ರತಿಮೆಯೊಂದು ಲಂಡನ್ ಸಂಗ್ರಹಾಲಯದಲ್ಲಿದೆ. ಈ ಅವಸ್ಥೆಯನ್ನು ಜೀವಂತ ಸ್ವಾಮಿಯೆಂದು ಕರೆಯಲಾಗುತ್ತಿತ್ತು. ಇದು ಸುಮಾರು ೯೦ ವರ್ಷಗಳ ಹಿಂದೆ ಬರೋಡಾ ಬಳಿಯ ಅಕೋಟಾ ಎಂಬಲ್ಲಿ ಸಿಕ್ಕಿತ್ತೆನ್ನಲಾಗಿದೆ. ಹೈದರಾಬಾದ ಕರ್ನಾತಕದ ಕಲ್ಬುರ್ಗಿ ಪ್ರದೇಶದಿಂದ ಕೊಂಡೊಯ್ದು ೧೨ ನೆಯ ಶತಮಾನದ ಕಾರ್ಯೋತ್ಸರ್ಗಿ ಶ್ರೀ ಪಾರ್ಶ್ವನಾಥ ಪ್ರತಿಮೆಯಂತು ಇಲ್ಲಿನ ಅಪೂರ್ವ ಸಂಗ್ರಹಗಳಲ್ಲೊಂದು. ಗುಪ್ತರ ಕಾಲದಲ್ಲಿನ ಮಧ್ಯಪ್ರದೇಶದಿಂದೋಯ್ದು ( ಕ್ರಿಶ. ೭೦೦) ಶ್ರೀ ಪಾರ್ಶ್ವನಾಥ, ಒರಿಸ್ಸಾ ರಾಜ್ಯಕ್ಕೆ ಸೇರಿದ ಅಂಬಿಕಾ ದೇವತೆ ಮತ್ತಿತರ ಮೂರ್ತಿಗಳೊಂದಿಗೆ ಅನೇಕ ಹಸ್ತ ಪ್ರತಿಗಳೂ ಇಲ್ಲಿ ಲಭ್ಯವಿವೆ.

ಬ್ರಿಟಿಷ ಮೂಸಿಯಂನಲ್ಲಿನ ಒರಿಸ್ಸಾದ ಏಕಶಿಲೆಯ ಪ್ರಥಮ ಹಾಗೂ ಅಂತಿಮ ತೀರ್ಥಂಕರರಾದ ಶ್ರೀ ವೃಷಭದೇವ ಮತ್ತು ಶ್ರೀ ಮಹಾವೀರರ ಕರ್ಯೋತ್ಸರ್ಗ ವಿಗ್ರಹಗಳು ೧೩ ನೆಯ ಶತಮಾನದವುಗಳಾಗಿವೆ. ವಿಕ್ಟೋರಿಯಾ ಅಂಡ್ ಅಲ್ಬರ್ಟ್ ಮ್ಯೂಸಿಯಂನಲ್ಲಿರುವ ೧೮ ನೆಯ ಶತಮಾನಕ್ಕೆ ಸೇರಿದ ಶ್ರೀ ಚಂದ್ರಪ್ರಭ ತೀರ್ಥಂಕರನ ಕೆಂಪುವರ್ಣದ ಪದ್ಮಾಸನಿ ಮೂರ್ತಿಯೊಂದು ಏಳು ಶಿರಗಳನ್ನೊಳಗೊಂಡಿದ್ದು ಜೈನ ಶಿಲ್ಪಕಲೆಯ ವಿಶಿಷ್ಟ ಮಾದರಿಯಾಗಿದೆ. ಅಂತೆಯೇ ಪ್ರಾಯಶಃ ಸ್ಯಾದ್ವಾದದ ಸಪ್ತಭಂಗಿ ನ್ಯಾಯ ಪದ್ದತಿಯ ಉಲ್ಲೇಖವಿದಾಗಿರಬಹುದೆನ್ನಲಾಗಿದೆ.

ಅಮೆರಿಕ

ಇಲ್ಲಿನ ಹತ್ತಾರು ಸಂಗ್ರಹಾಲಯಗಳಲ್ಲಿ ಗುಜರಾತ್, ಮಧ್ಯಭಾರತ್ ಮತ್ತು ಕರ್ನಾಟಕ ಪ್ರದೇಶಗಳಿಗೆ ಸೇರಿದ ಅನೇಕ ಶ್ರೀ ಪಾರ್ಶ್ವನಾಥ ಮೂರ್ತಿಗಳಿವೆ. ಮಧ್ಯಭಾರತಕ್ಕೆ ಸೇರಿದ ಸುಮಾರು ೬ ನೆಯ ಶತಮಾನದ ಲೋಹದ ಸೂಕ್ಷ್ಮ ಕೆತ್ತನೆಯ ಖಡ್ಗಾಸನ ಮೂರ್ತಿಯೂ ತುಸುಭಿನ್ನವಾಗಿರುವುದೂ ಕಂಡು ಬಂದರು ಅದರ ಶಿಲ್ಪಸೌಂದರ್ಯಕ್ಕೆ ಕುಂದು ಬಂದಿಲ್ಲ. ಗುಜರಾತ್ ಪ್ರಾಂತ್ಯದ ಕ್ರಿಶ. ೯೮೮ ರ

ಕಾಲದ ಶಿಲ್ಪವು ಲಾಸಂಜಲೀಸನ ಸಂಗ್ರಹಾಲಯದಲ್ಲಿದೆ. ನ್ಯೂಯಾರ್ಕ್ ಸಂಗ್ರಹಾಲಯದಲ್ಲಿ ಕ್ರಿಶ. ೧೦೨೦ ಕಾಲಾವಧಿಯ ವಿಗ್ರಹವಿದೆ. ಎಲ್ಲಕ್ಕೂ ಮಿಗಿಲಾಗಿ ಮೈಸೂರು ಜಿಲ್ಲೆಯ ವರುಣ ಗ್ರಾಮದ ೧೧ ನೆಯ ಶತಮಾನಕ್ಕೆ ಸೇರಿದ ಪಾರ್ಷ್ವನಾಥ ಮೂರ್ತಿಯು ಸಾನ್ ಫ್ರಾನ್ಸಿಸ್ಕೋನ ವಸ್ತು ಸಂಗ್ರಹಾಲಯದಲ್ಲಿದೆ.

ವಾಷಿಂಗಟನ್ನಿನ ಸ್ಮಿತ್ ಸೋನಿಯನ್ ಇನ್ಸ್ಟಿಟ್ಯೂಟ ಗ್ಯಾಲರಿ ಆಫ್ ಆರ್ಟ್ಸ್‌ನಲ್ಲಿರುವ ' ಕಲ್ಪಸೂತ್ರ ' ದ ಶ್ರೀ ಮಹಾವೀರನ ತಾಯಿ ತ್ರಿಶಲಾದೇವಿಯು ಕಂಡ ಹದಿನಾರು ಸ್ವಪ್ನಗಳು ಹಾಗೂ ಶ್ರೀ ಮಹಾವೀರನ ಬೋಧನೆಯ ಚಿತ್ರಕಲೆಯು ನೋಡತಕ್ಕವು.

ನೆವಡ ಪ್ರಾಂತ್ಯದ ಲಾಸ್‌ವೆಗಾಸ್ ನಗರದಲ್ಲಿರುವ ದಿ ಕಾಸ್ಟ್‌ವೇಸ್ ಎಂಬ ಐಷಾರಾಮಿ ಹೋಟೆಲಿನ ತೋಟದಲ್ಲಿ ತೇಗದ ಮರದ ಒಂದು ಜಿನಾಲಯ ಪ್ರತಿಕೃತಿಯಿದೆ. ಹೋಟಲಿನ ಮಾಲಿಕರು ಅದನ್ನು ' ಅದೃಷ್ಟ ಬಾಗಿಲು ' ಎಂದು ಕರೆದಿರುವರು ಇದು ಗುಜರಾತಿನ ಪಾಲಿಥಾನದ ಜೈನ ಬೀದಿಯೊಂದರ ತದ್ರೂಪವಾಗಿದ್ದು ೧೯೦೪ – ೫ ರಲ್ಲಿ ಅಮೆರಿಕದಲ್ಲಿ ಸಂತ ಲೂಯಿಸ್ ಜಾತ್ರೆಯಲ್ಲಿ ಪ್ರದರ್ಶನಗೊಂಡಿತ್ತು.

ರಾಜಧಾನಿ ಕೂಪನ್‌ಹಾಗ್‌ನಲ್ಲಿರುವ ರಾಷ್ಟ್ರೀಯ ವಸ್ತು ಸಂಗ್ರಹಾಲಯ (**National Museet**) ದಲ್ಲಿ ಹದಿಮೂರನೆಯ ಶತಮಾನದ ಮತ್ತು ಮಧ್ಯಯುಗದ ಮೂರ್ತಿಗಳಿವೆ. ಕರ್ನಾಟಕದ ಹೊಯ್ಸಳದ ರಾಜಧಾನಿ ಹಳೇಬೀಡು ( ದ್ವಾರಸಮುದ್ರ ) ದೇವಾಲಯಗಳ ಅನೇಕ ಸುಂದರ ಮೂರ್ತಿ ಶಿಲ್ಪಗಳ ತುಣುಕುಗಳಿವೆ. ಶ್ರೀ ಮಹಾವೀರನ ಪದ್ಮಾಸನ ಹಾಗೂ ನಿಂತ ನಿಲುವಿನ ಮೂರ್ತಿಗಳು, ಆಸೀನ ಶ್ರೀ ಚೌವ್ವೀಸ ತೀರ್ಥಂಕರರು ಮತ್ತು ಚೌವ್ವೀಸ ತೀರ್ಥಂಕರರ ಸೂಪ್ತ ಮೊದಲಾದ ಸಂಗ್ರಹಗಳಿವೆ.

ಜೈನ ಮಂದಿರಗಳು

ಬಸದಿಗಳು ದೇವತಾರ್ಚನ ತಾಣಗಳಾಗಿರುವುದರೊಂದಿಗೆ ಸಾತ್ವಿಕತೆ, ನೆಮ್ಮದಿ ಮತ್ತು ಮನಃ ಶಾಂತಿಯ ನೆಲೆಗಳಾಗಿ ಬೆಳಗುತ್ತಲಿವೆ. ಅವು ಧಾರ್ಮಿಕ ಪರಂಪರೆಯ ಪ್ರತೀಕಗಳಾಗಿರುವಂತೆಯೇ ವಾಸ್ತು ಶಿಲ್ಪಕಲಾ ಪ್ರತಿಮಾ ವಿಧಾನಗಳು ಹೌದು, ಅಂತೆಯೇ ಜಿನಾಲಯಗಳ ಅವಶ್ಯಕತೆಯನ್ನು ನುಮಗಂಡು ಕಡಲಾಚೆಯ ಭಾರತೀಯರು ದಿಗಂಬರ, ಶ್ವೇತಾಂಬರ, ಸ್ಥಾನಿಕವಾಸಿ, ತೇರಾಪಂಥಿ ಮತ್ತು ಓಸ್ವಾಲ್ ಮೊದಲಾದ ವಿವಿಧ ಪಂಗಡಗಳಿಗೆ ಸೇರಿದ್ದರೂ ಕೂಡ ಏಕದೇವೋಪಾಸನೆಯ ತತ್ವವನ್ನನುಸರಿಸಿ ಧರ್ಮಶ್ರದ್ಧೆಯನ್ನು ಮೆರೆದಿರುವರು. ಆಫ್ರೋ ಏಷ್ಯನ್ ಮತ್ತು ಯೂರೋಪಿಯನ್ ರಾಷ್ಟ್ರಗಳು ಇತ್ತೀಚಿನ

ದ್ರಾಕಗಳಲ್ಲಂತೂ ಮಂದಿರ ಮತ್ತು ಧರ್ಮಪ್ರವಚನ ಸ್ಥಳಗಳಿಗೆ ಆಹ್ಲಾದಾಯಕವಾಗಿರುವುದು ಸಂತಸದ ಸಂಗತಿಯಾಗಿದೆ.

ನೈರೋಬಿಯ ರಾಜಧಾನಿಯಾದ ಕೀನ್ಯಾದಲ್ಲಿ ಸುಮಾರು ೮೦೦೦ ಜೈನ ಮತೀಯರಿರುವರೆನ್ನ ಲಾಗಿದೆ. ಅಂತೆಯೇ ಮೌಂಟ್ ಅಬು ಮತ್ತು ರಾಣಕಪುರ ದೇವಾಲಯಗಳ ಮಾದರಿಯಲ್ಲಿ ದಿಗಂಬರ ಹಾಗೂ ಶ್ವೇತಾಂಬರ ಜಿನಮಂದಿರಗಳು ಅತ್ಯಾಕರ್ಷಕವಾಗಿ ನಿರ್ಮಾಣಗೊಂಡಿವೆ. ಜೈನ ಶ್ರಾವಕ ಧುರೀಣರಾದ ಮೈಸೂರಿನ ಶ್ರೀ ಸಿ.ಬಿ.ಎಂ. ಚಂದ್ರಯ್ಯನವರು ೧-೧-೧೯೮೦ ರಂದು ಅಲ್ಲಿನ ಧಾರ್ಮಿಕ ವಿಧಿ ವಿಧಾನಗಳಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡು ಧರ್ಮ ಪ್ರಭಾವನೆಯ ಕೈಂಕರ್ಯದಲ್ಲಿ ನಿರತಾಗಿದ್ದರು. ಇಲ್ಲಿನ ನಿವಾಸಿಗಳಾಗಿರುವ ಅನೇಕ ಕನ್ನಡಿಗರು ಕರ್ನಾಟಕ ಜೈನ ಸಂಸ್ಕೃತಿಯ ವಾಹಕರಾಗಿ ಕಾರ್ಯ ವೆಸಗುತ್ತಿರುವರು.

ಜಪಾನಿನ ಕೋವಾ ( ಕೊಬೆ ) ನಗರದಲ್ಲಿ ನೆಲೆಸಿರುವ ಮುತ್ತು ರತ್ನ ವಜ್ರಾದಿಗಳ ವ್ಯಾಪಾರಿಗಳು ಧರ್ಮಪಾರಾಯಣರಾಗಿ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಜಸ್ಥಾನದಿಂದ ಸರಬರಾಜಾದ ಪರಿಕರಗಳಿಂದ ಎರಡು ಮಹಡಿಗಳನ್ನು ಳ್ಳ ಶ್ರೀ ಮಹಾವೀರ ಚೈತ್ಯಾಲಯವನ್ನು ನಿರ್ಮಿಸಿ ೧-೬-೧೯೮೫ ರಂದು ಉದ್ಘಾನೆಗೈದರು.

ಕೆನಡಾದ ಟೊರೆಂಟೋ ನಗರದಲ್ಲಿ ಜೈನ ಸಮಾಜವು ನಿರ್ಮಿಸಿದ ಜೈನ ಸೆಂಟರ್‌ನಲ್ಲಿ ಭಗವಾನ್ ಶ್ರೀ ಮಹಾವೀರನ ಮೂರ್ತಿಯನ್ನು ೫ ನೆಯ ಜಾಗತಿಕ ಧರ್ಮಶಾಂತಿ ಸಮ್ಮೇಳನದ ಸಂದರ್ಭದಲ್ಲಿ ಪ್ರತಿಷ್ಠಾಪಿಸಲಾಯಿತು. ಕೊಲ್ಲಾಪುರದ ಶ್ರೀ ಲಕ್ಷ್ಮೀ ಸೇನ ಭಟ್ಟಾರಕರು ಉಪಸ್ಥಿತರಿದ್ದು ಣಮೋಕಾರ ಮಂತ್ರದ ತಾಮ್ರ ಪಟಗಳನ್ನು ನೆರೆದಿದ್ದ ಭಕ್ತಾದಿಗಳಿಗೆ ನೀಡಿದ್ದರು.

ಅಮೆರಿಕ ನ್ಯೂಜೆರ್ಸಿ ರಾಜ್ಯದ ಪೆನ್ನು ಹಾಸ್‌ಕೆನ್‌ನ ಶ್ರೀ ಸಿದ್ಧಾಚಲಂ ಆಶ್ರಮದ ಶ್ರೀಕರ ವಾತಾವರಣದಲ್ಲಿ ಮತ್ತು ಆಶ್ರಮದ ಸಂಸ್ಥಾಪಕ ಅಧಿಷ್ಠಾತ ಮತ್ತು ಕುಲಪತಿಗಳೂ ಆದ ಪರಮಪೂಜ್ಯ ಆಚಾರ್ಯ ಸುಶೀಲ್ ಕುಮಾರ್‌ಜೀ ಮುನಿಮಹಾರಾಜ್‌ರ ಸಮ್ಮುಖದಲ್ಲಿ ವರ್ಲ್ಡ್ ಜೈನ ಕಾಂಗ್ರೇಸ್ ಅಡಿಯಲ್ಲಿ ನೆರವೇರಿದ ಚೈತ್ಯಾಲಯ ನಿರ್ಮಾಣದ ಸಮಾರಂಭದ ಅಡಿಗಲ್ಲನ್ನು ೨೪-೭-೧೯೮೮ ರಂದು ಧರ್ಮ ಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಇಟ್ಟಿದ್ದರು. ೨- ೧೧ ಆಗಸ್ಟ್ ೧೯೯೧ ರಂದು ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ಪ್ರತಿಷ್ಠಾನ ಮಹೋತ್ಸವವು ಆಗಮೋಕ್ತ

ವಿಧಾನಗಳಂತೆ ನೆರವೇರಿತು. ಮೇರಿ – ಲ್ಯಾಂಡ ವಾಷಿಂಗ ಟನ್ ನಲ್ಲಿಯೂ ಜೈನ ದೇಗುವವೊಂದು ಕಟ್ಟಲ್ಪಟಿದೆ.

ಯೂರೋಪ ಖಂಡದ ಜೈನ ಕೇಂದ್ರವಾಗಿ ಇಂಗ್ಲೇಂಡ ದೇಶವು ರೂಪುಗೊಳ್ಳುತ್ತಿರುವುದು ಗಮನಾರ್ಹವಾಗಿದೆ. ಲಂಡನ್ ನಗರದಿಂದ ನೂರು ಮೈಲಿಗಳ ಅಂತರದಲ್ಲಿ ಮೂರು ಲಕ್ಷ ಜನಸಂಖ್ಯೆಯನ್ನುಳ್ಳ ಲೆಸ್ಟರ್ ನಗರದ ಆಕ್ಸ್‌ಫರ್ಡ್ ರಸ್ತೆಯ ಬಳಿ ಅಮೃತ ಶಿಲೆಯ ಎರಡು ಅಂತಸ್ತುಗಳುಳ್ಳ ಚೈತ್ಯಾಲಯವೊಂದು ಭಾರತೀಯ ಜೈನ ಶಿಲ್ಪ ಕಲೆಯ ರೂಪುರೇಷಗಳನ್ನು ಅನುಸರಿಸಿ ನಿರ್ಮಿಸಲ್ಪಟ್ಟಿದೆ. ಮಂದಿರದ ಎರಡನೆಯ ಅಂಹಸ್ತಿನಲ್ಲಿ ಅಹಮದಾಬಾದಿನ ಏಳು ಅಡಿಗಳೆತ್ತರದ ಖಡ್ಗಾಸನಿ ಶ್ರೀ ಬಾಹುಬಲಿ ಮತ್ತು ಜಯಪುರದ ಪದ್ಮಾಸನಿ ಶ್ರೀ ಪಾರ್ಶ್ವನಾಥ, ಶ್ರೀ ಶಾಂತಿನಾಥ ಮತ್ತು ಶ್ರೀ ವರ್ಧಮಾನ ಮಹಾವೀರ ತೀರ್ಥಂಕರರ ಬಿಳಿಶಿಲೆಯ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ( ೨೫– ೭– ೧೯೮೦) ಅಲ್ಲದೆ ಶ್ರೀ ಚಕ್ರೇಷ್ವರೀ ಶ್ರೀ ಕೂಷ್ಮಾಂಡಿನಿ, ಶ್ರೀ ಪದ್ಮಾವತಿ ಯಕ್ಷಿಯರ ಮತ್ತು ಶ್ರೀ ಸರಸ್ವತಿ ಮತ್ತು ಶ್ರೀ ಗಜಲಕ್ಷ್ಮೀ ದೇವತೆಗಳ ಮೂರ್ತಿಗಳೂ ಕಾಣಬರುತ್ತದೆ. ಮೊದಲ ಅಂತಸ್ತಿನ ಸಭಾಂಗಣದಲ್ಲಿ ರಂಗ ಮಂಚ, ಗ್ರಂಥಾಲಯ ಮತ್ತು ಭೋಜನಶಾಲೆಯನ್ನು ಅಡಕಮಾಡಲಾಗಿದೆ. ಸ್ಥಳೀಯ ಜೈನ್ ಸೆಂಟರ್ ಆಫ್ ಯೂರೋಪ್ ಮತ್ತು ಸೋಷಿಯಲ್ ಗ್ರೂಪ್ಸ್ ಫೆಡೆರೇಷನ್ ಸಂಯುಕ್ತಾಶ್ರಯದ ಕೈಂಕರ್ಯದಲ್ಲಿ ಶ್ರವಣಬೆಳಗೊಳದ ಕರ್ಮಯೋಗಿ ಶ್ರೀ ಚಾರುಕೀರ್ತಿ ಭಟ್ಟಾರಕರು ಮಾರ್ಗ ದರ್ಶನ ನೀಡಿ ನೂತನ ಜೈನ ಮಂದಿರದ ಪಂಚಕಲ್ಯಾಣ ಕಾರ್ಯಕ್ರಮವನ್ನು ನೇರವೇರಿಸಿದರು. ಇದು ದಿಗಂಬರ, ಶ್ವೇತಾಂಬರ ಮತ್ತು ಸ್ಥಾನಿಕವಾಸಿ ಸಂಪ್ರದಾಯ ಮಂದಿರಗಳ ಸಂಕೀರ್ಣವಾಗಿದೆ.

ವಿದೇಶಗಳಲ್ಲಿ ನೆಲೆಸಿರುವ ಜೈನರ ಸಂಖ್ಯೆಯು ಸುಮಾರು ಒಂದು ಲಕ್ಷಕ್ಕೂ ಮೀರಿದೆಯೆಂದು ಅಂದಾಜು ಮಾಡಲಾಗಿದೆ. ಹಲವಾರು ಕುಟುಂಬಗಳು ಈ ಶತಕದಲ್ಲಿ ಉದ್ಯೋಗಾರ್ಥಿಗಳಾಗಿಯೋ ಇಲ್ಲವೇ ವೈವಾಹಿಕ ಸಂಬಂಧದ ನಿಮಿತ್ತವಾಗಿ ತೆರಳಿ ನೆಲೆಸಿದ್ದರೆ ಮತ್ತೆ ಕೆಲವು ಮನೆತನಗಳು ನೂರಾರು ವರುಷಗಳ ಹಿಂದೆ ಕಾರಣಾಂತರಗಳಿಂದ ವಲಸೆ ಹೋಗಿ ತಮ್ಮ ಮೂಲ ಧಾರ್ಮಿಕ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವವರು ಅಂತೆಯೇ ಸಂಘಟನಾರ್ಥವಾಗಿ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿಕೊಂಡು ಧರ್ಮ ಬೋಧನೆ ಸತ್ಸಂಗ ಮತ್ತು ಮಂದಿರ ನಿರ್ಮಾಣ ಮೊದಲಾದ ರಚನಾತ್ಮಕ ಕಾರ್ಯಗಳಲ್ಲಿ

ತೊಡಗಿಸಿಕೊಂಡಿರುವರು ; ಜೈನ ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವರು.

ಪಶ್ಚಿಮ ಜರ್ಮನಿಯ ನ್ಯೂ ಹ್ಯಾಂಬರ್ಗ್‌ನ ಅಂತಾರಾಷ್ಟ್ರೀಯ ಜೈನ ಸಮಾಜ ಸಂಘ (**Jain Associations Inernational Society**) ಸಿಂಗಪುರದಲ್ಲಿಯ ಸಿಂಗಪೂರ್ ಜೈನ್ ಧಾರ್ಮಿಕ ಸಂಘ (**Singapore jain Religious Society**), ಕೆನಡಾದ ಎಡ್‌ಮನ್‌ಟನ್ನಿನ ಜೈನ ಸಮುದಾಯ (**jain Group of Edmunton**), ರಿಚಮಂಡ್‌ನ ಕೊಲಂಬಿಯಾದ ಜೈನ ಕೇಂದ್ರ ಸ್ಕಾರ್‌ಬೋವಿನ ಐ.ಎಂ.ಜಿ.ಎಂ. (**I.M.G.M**) ಮತ್ತು ಕಾರ್ಲ್‌ಟರ್ನ್‌ನ ಒಟ್ಟಾವ ಜೈನ ಸಮಾಜ (**jain society of ottawa**)ವು ಬಹು ಕ್ರಿಯಾಶೀಲತೆಯನ್ನು ತೋರಿವೆ.

ಜರ್ಮನಿಯ ಹ್ಯಾಂಬರ್ಗ್ ವಸ್ತು ಸಂಗ್ರಹಾಲದಲ್ಲಿ ೨೪ ತೋಳುಗಳನ್ನುಳ್ಳ ಕ್ರಿಶ್. ೧೬೩೬ ರ ಅತ್ಯಪೂರ್ವ ಕಂಚಿನ ಯಕ್ಷಿ ಶ್ರೀ ಪದ್ಮಾವತಿ ದೇವಿಯ ವಿಗ್ರಹವಿದೆ. ಇದು ' ಪ್ರತಿಷ್ಠಾಸಾರ ಸಂಗ್ರಹ' ದಲ್ಲಿನ ವರ್ಣನೆಯನ್ನು ದಿಗಂಬರ ಪಂಥದನ್ವಯದ ದೇವತಾಮೂರ್ತಿಯಾಗಿದೆ. ಪದ್ಮಾವತಿ ಸ್ತೋತ್ರವೆಂಬ ಇನ್ನೊಂದು ಗ್ರಂಥದಲ್ಲಿ ಪ್ರಸ್ತಾಪಿಸಿರುವ ಯಕ್ಷಿಯ ಶಿಲ್ಪವಿದಾಗಿದೆ. ಆದರೆ ಇದನ್ನು ವಿಷಯಪಟ್ಟಿಯಲ್ಲಿ ಕಾರ್ತೀಕೆಯ ಎಂದು ತಪ್ಪಾಗಿ ಗುರುತಿಸಲಾಗಿದೆ. ಯಕ್ಷಿಯು ಹಂಸವಾಹಿನಿಯಾಗಿದ್ದು ಶಿರೋಭಾಗದಲ್ಲಿ ಮೂರುಹೆಡೆಗಳನ್ನುಳ್ಳ ಸರ್ಪವನ್ನೊಳದಿರುವ ಶ್ರೀ ಪಾರ್ಶ್ವನಾಥನನ್ನು ಧರಿಸಿದ್ದಾಳೆ. ಆಕೆಯ ಬಲಗೈ ವರಹ ಹಸ್ತ ಮತ್ತು ಎಡಗೈ ಅಸ್ಪಷವಾದ ವಸ್ತುವನ್ನು ಹಿಡಿದಿವೆ. ಅಂತೆಯೇ ಮಿಕ್ಕ ಬಲತೋಳುಗಳಲ್ಲಿ ಮೇಲಿನಿಂದ ಕೆಳಕ್ಕೆ ಕ್ರಮವಾಗಿ ಖಡ್ಗ ಕಮಲ, ಛತ್ರಿ ಮುಂಡ, ಬಿಲ್ಲು, ಗುರುತಿಸದಿರುವ ವಸ್ತು, ಗದೆ, ಕುಡುಗೋಲು, ತ್ರಿಶೂಲ ಅಸ್ಪಷ್ಟ ಮತ್ತು ಸರ್ಪವಿದ್ದರೆ ಎಡತೋಳುಗಳಲ್ಲಿ ಅಂಕುಶ, ಚಕ್ರ, ಢಮುರ, ವಜ್ರ, ಗುರಾಣಿ, ದಂಡ, ಅಗ್ನಿ, ಜಪಮಾಲೆ, ಕೊಡಲಿ, ಘಂಟೆ, ಮತ್ತು ಕುಣಿಕೆಯನ್ನು ಹಿಡಿದಿರುವಳು. ದೇವಿಯ ಕರಂಡದಾಕೃತಿಯ ಕಿರೀಟ ಮತ್ತು ಅನೇಕ ಇತರ ಒಡವೆಗಳನ್ನು ತೊಟ್ಟಿರುವಳು.

ಬ್ರಿಟನ್ನಿನ ಸುಮಾರು ಇಪ್ಪತ್ತು ಜೈನ ಸಂಘಗಳಿವೆ. ಡಾ|| ನಟ್ಟೂ ಬಾಯಿ ಶಹಾ ಅವರ ಅಧ್ಯಕ್ಷತೆಯಲ್ಲಿನ ಲೆಸ್ಟರ್‌ನಲ್ಲಿರುವ ಯೂರೋಪಿನ ಜೈನ ಸಮಾಜ (**jain samaj of Europe** ) ಲಂಡನ್ನಿನ ಮಹಾವೀರನ ಪ್ರತಿಷ್ಠಾನ (**Mahaveer Foundation**), ಭಕ್ತಿ ಮಂಡಳ (**Bhakti Mandal**) ನವಾಂತ್ ವಣಿಕ ಸಂಘ, ದಿಗಂಬರ ವೀಸಾ ಮೇವಾಡ ಸಂಘ, ಅಂತಾರಾಷ್ಟ್ರೀಯ

ಮಹಾವೀರ ಮಿಷನ್ ಮಿಡ್ಲ್ ಸೆಕ್ಸನ್ ಜೈನ ಯುವಕ ಸಂಘ ( ), ಇಂಗ್ಲೇಂಡಿನ ಓಸ್ವಾಲ್ ಸಂಘ, ಜೈನ ಸಮುದಾಯ, ಇಂಗ್ಲೇಂಡಿನ ಜೈನಸಂಘ, ಆರ್ಪಿಗ್‌ಟನ್ನಿನ ನವಯುಗ ಜೈನ ಪ್ರಗತಿ ಮಂಡಳ ಮತ್ತು ಸ್ಯಾಂಡರ್‌ಸ್ಟೇಡ್‌ನ ಇಂಗ್ಲೇಂಡ್ ಜೈನ ಸಂಘ ಮೊದಲಾದುವು ಬ್ರಿಟನ್ನಿನಾದ್ಯಂತ ಜಿನಸಂದೇಶ'ವನ್ನು ಸಾರುತ್ತಿವೆ.

* ಎ ಬ್ರಾಂಚ್ ಇಮ್ಯಾಜ್ ಆಫ್ ಯಕ್ಷಿ ಪದ್ಮಾವತಿ – ಕಲೆಕ್ಷನ್ ಆಫ್ ಹ್ಯಾಂಬರ್ಗ್ ಮ್ಯೂಸಿಯಂ, ಜರ್ಮನಿ : ಲಲಿತ್ ಕುಮಾರ್ ( ಜಿನ ಮಂಜರಿ : ಎಸ್.ಎ. ಭುವನೇಂದ್ರ ಕುಮಾರ್, ಸಂಪುಟ ೪, ಸಂಚಿಕೆ ೩ )

ಕೆನಡಾ ದೇಶ'ದಲ್ಲಿ ಎಡ್ಮಂಟನ್ ಕಾರ್ಲ್‌ಟನ್, ರಿಚ್‌ಮಂಡ್, ಸ್ಕಾರ್‌ಬೋಹ್, ಮಾಂಟ್ರಿಯಲ್ ಜೈನ ಸೊಸೈಟಿ ಮತ್ತು ನಯಾಗರ ಜಲಪಾತದ ಬಳಿ ಜೈನ್ ಕಲ್ಚರಲ್ ಕೇಂದ್ರಗಳಿವೆ.

ಸಿಂಗಾಪುರದಲ್ಲಿ ಸುಂದರವಾದ ಜೈನ ಬಸದಿಯಿದೆ. ಅಲ್ಲಿನ ಜೈನ್ ಸೊಸೈಟಿಯ ಅಧಕ್ಷರಾಗಿ ಶ್ರೀ ನಾಗಿನ್‌ದಾಸ್ ದೋಶಿಯವರು ಕಾರ್ಯ ನಿರ್ವಹಿಸುತ್ತಿರುವರು.

ವುಡ್‌ರಿಡ್ಜ್, ಓಕಾಡೇಲ್, ಲೂಯಿಸ್‌ವಿಲ್ಲೆ ಲ್ಯಾನ್ಸಿಂಗ್ – ಓಕೆಮೋಸ್, ಅರಿಜೋನ – ಗ್ರೇಟರ್ ಫಿನಿಕ್ಸ್, ಲಾಸಾಂಜಿಲಿಸ್, ಬ್ಯೂನಾಪಾರ್ಕ, ಸ್ಯಾನಿಡಿಯಾಗೋ, ಕ್ಯಾಲಿಫೋರ್ನಿಯಾ – ಫ್ರೇಮಾಂಟ್, ಕನೆಕ್ಟಿಕಟ್, ಡೇಟೋನಾ ಬೀಚ್, ಫ್ಲೋರಿಡ್ – ಲಾಂಗ್‌ವುಡ್ ಹಾಗೂ ವಸ್ಟ್‌ಪಾಮ್ ಬೀಚ್, ಬೋಕಾರೇಟನ್, ಅಟ್ಲಾಂಟ – ಅಥೆನ್ಸ್, ಚಿಕಾಗೋ – ಇಟಾಸ್ಕಾ ಹಾಗೂ ಬೆನ್ಸನ್‌ವಿಲ್ಲೆ, ಲೂಸಿಯಾನಾ – ಹಾರ್ವೆ, ಗ್ರೇಟರ್ ಬಾಸ್ಟನ್ – ವೆಲ್ಲೆಸ್ಲೀ, ಗ್ರೇಟರ್ ಡೇಟ್ರಾಯಿಟ್ – ಟೇಲರ್, ಮಿನಿಸೋಟಾ, ಗ್ರೇಟರ್ ಸೈಂಟ್ ಲೂಯಿಸ್ – ಮ್ಯಾಂಚಸ್ಟರ್, ಗಾರ್ನರ್ ಚಾರ್ಲಾಟ್ ( ನಾರ್ಥ್ ಕೆರೋಲೀನಾ ), ನ್ಯೂಜೆರ್ಸಿ, ಬ್ಲೈರ್ಸ್ ಟಾನ್, ಬರ್ಲೀನ್, ನ್ಯೂಯಾರ್ಕ್, ನ್ಯೂಹೆವೆನ್, ಲಾಂಗ್ ಐಲ್ಯಾಂಡ್, ಲಿವರ್ ಪೂಲ್, ಬೆಫಾಲೋ, ಅಲೆನ್‌ಟಾನ್, ರೋಚೆಸ್ಟರ್, ಗ್ರೇಟರ್ ಕ್ಲೀವ್‌ಲ್ಯಾಂಡ್, ಪಾರ್ಮಾ, ಸಿನ್ಸಿನಾಟಿ, ಸಾನ್‌ಫ್ರಾನ್ಸಿಸ್ಕೋ, ಟೊಲೊಡೊ, ಪಿಟ್ಸ್‌ಬರ್ಗ್, ಗ್ರೀನ್‌ವಿಲ್ಲೆ, – ಟೆಕ್ಸಾಸ್ ( ಡಲ್ಲಾಸ್), ಹ್ಯೂಸ್ಟನ್, ಕೆನಡಾದ ನಯಾನಗರ ಜಲಪಾತದ ಬಳಿಯಿರುವ ಜೈನ ಕಲ್ಚರಲ್ ಕೇಂದ್ರ, ಮೆಟ್ರೋ ವಾಷಿಂಗಟನ್, ಬ್ರಿಟೀಷ್ ಕೊಲಂಬಿಯಾ, ಅಲೆನ್ ಮತ್ತು ಮಿಲ್‌ವಾಕಿ ಮೊದಲಾದ ಸ್ಥಳಗಳಲ್ಲಿನ ಯುವಕ ಜೈನ ಮಂಡಳಿಗಳು ಪ್ರತಿಷಾನಗಳು, ಮಿಲನ್‌ಗಳು ಮತ್ತು ಸಮೂಹಗಳು ಅಮೆರಿಕ ದೇಶಾದ್ಯಂತ ಪಸರಿಸಿವೆ. ಕ್ಯಾಲಿಫೋರ್ನಿಯಾದ ಜೈನ ಕೇಂದ್ರವು ಮಹಿಳಾ ಮಂಡಲವನ್ನೂ ಹೊಂದಿವೆ.

ಆಚಾರ – ವಿಚಾರ – ಪ್ರಚಾರ

ಯಾವುದೇ ಚಲನ ಶೀಲ ಧರ್ಮವು ತನ್ನ ಅಸ್ತಿತ್ವ ಮತ್ತು ಉದ್ದೀಪನ ಪ್ರಕ್ರಿಯೆಯನ್ನು ಕಂಡು ಕೊಳ್ಳಬೇಕಾದರೆ ಪ್ರಭುತ್ವ ಅರ್ಥಾತ್ ರಾಜಾಶ್ರಯ ಇಲ್ಲವೇ ಪ್ರಜಾಶ್ರಯವು ಪ್ರಮುಖವು ಪಾತ್ರವನ್ನು ವಹಿಸುತ್ತದೆ. ಅಂತೆಯೇ ಧರ್ಮಜಾಗೃತಿಯೂ ನಿರಂತರವಾಗಿರಬೇಕಾದರೆ ಕಾಲಕ್ಕೆ ತಕ್ಕಂತೆ ಅಗತ್ಯಕ್ಕನು ಗುಣವಾಗಿ ಸೂಕ್ತ ಹಾಗೂ ಸಮರ್ಥ ಮಾರ್ಪಾಟು – ಸುಧಾರಣೆಯನ್ನು ಕಂಡು ಕೊಳ್ಳಲೆತ್ನಿಸುವುದು ಬಹು ಮುಖ್ಯವಾದುದು. ಚಿರಂತನ ಬದುಕಿನ ಮೌಲ್ಯಗಳನ್ನು ಪುಷ್ಟೀಕರಿಸಬೇಕಾದಲ್ಲಿ ಜೈನ ಧರ್ಮಾಸಕ್ತರು ಪಕ್ಷ – ಪಂಗಡಗಳ ಭೇದಗಳನ್ನು ಕಡೆಗಣಿಸಿ ಧರ್ಮದ ತತ್ವಗಳ ಕುರಿತು ಚಿಂತನ ಮಂಥನವನ್ನು ಮಾಡಬೇಕು. ತೀರ್ಥಂಕರರ ಮತ್ತು ಜೈನಾಚಾರ್ಯರ ಉಪದೇಶಾಮೃತವನ್ನು ವಿಶ್ವದಾದ್ಯಂತ ಪಸರಿಸುವಲ್ಲಿ ಕಾಯಾ ವಾಚಾ ಮನಸಾ ಭಾಗಿಗಳಾಗಬೇಕು. ಮಡಿವಂತಿಕೆಯನ್ನು ತೊರೆದು ತತ್ವಗಳ್ ಅಂತಃ ಸತ್ವವನ್ನು ಮನಗಾಣುವಂತಾಗಬೇಕು. ಈ ದಿಸೆಯಲ್ಲಿ ಕಾರಣಾಂತರಗಳಿಂದ ಸಾಗರದಾಚೆ ನೆಲೆಸಿರಬೇಕಾಗಿ ಬಂದ ಜೈನ ಧರ್ಮೀಯರು ಧರ್ಮಾಚರಣೆಯೊಂದಿಗೆ ಅದರ ವಿಚಾರ ಮತ್ತು ಪ್ರಚಾರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವುದು ಅಭಿನಂದನೀಯ.

೧೧–೯–೧೮೯೩ ರಂದು ರಾಷ್ಟ್ರ ಧರ್ಮ ವೀರ ಶ್ರೀ ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ನೆರವೇರಿದ ವಿಶ್ವಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮದ ಸಂದೇಶವನ್ನು ಮೊಳಗಿಸಿದರಷ್ಟೇ. ಇವರೊಡನೆ ಇದೇ ಸಮಾರಂಭದಲ್ಲಿ ಗುಜರಾತಿನ ಶ್ರೀ ವೀರಚಂದಾಬಾಯಿ ಗಾಂಧಿಯವರು ತೆರಳಿ ಜೈನ ಧರ್ಮದ ಉದಾತ್ತ ತತ್ವಗಳನ್ನು ಪ್ರತಿಪಾದಿಸಿದರು. ಅವರು ಕೇವಲ ೩೭ ವರ್ಷಗಳಷ್ಟು ಕಾಲ ಬದುಕಿದ್ದರೂ ( ಜನನ : ೨೫–೮–೧೮೬೪ : ಮರಣ : ೭–೮–೧೯೦೧) ಅಗಣಿತವಾದುದನ್ನೇ ಸಾಧಿಸಿದರು. ಎರಡು ವರ್ಷಗಳ ಕಾಲ ಅಮೆರಿಕದಲ್ಲಿ ತಂಗಿದ್ದು ಧರ್ಮ ಪ್ರಭಾವನೆಗೈದರು. ಬ್ಯಾರಿಸ್ಟರ್ ಪದವಿಧರರಾಗಿದ್ದು ಇಂಗ್ಲೀಷ ಭಾಷೆಯಲ್ಲಿ ಯೋಗದರ್ಶನ, ಜೈನ ದರ್ಶನ ಮತ್ತು ಭಾರತೀಯ ದರ್ಶನ ಗ್ರಂಥಗಳನ್ನು ರಚಿಸಿದರು. ಚಿಕಾಗೋ ನಗರದ ಮಹಾವಿದ್ವಾಂಸ ಫಾದರ್ ಆರ್. ವೈಟ್, ಪ್ರಮುಖ ನ್ಯಾಯಾಧೀಶ ಈ.ಬಿ. ಶರ್ಮನ್ ಮುಂತಾದವರು ಲಂಡನ್ನಿನ ಹರ್ವರ್ದ್‌ವಾರನ್ ಇವರಿಂದ ಪ್ರಭಾವಿತರಾಗಿದ್ದರು. ಜರ್ಮನ ವಿದ್ವಾಂಸ ವಿ. ಗ್ಲೇಸನಯ್ ಎಂಬುವರು ವೀರಚಂದರ ಕೃತಿಗಳಿಂದ ಪ್ರೇರಣೆ ಹೊಂದಿ ' ಜೈನ ದರ್ಶನ ಮತ್ತು ಕರ್ಮವಾದ ' ವೆಂಬ ಮಹಾ ಪ್ರಬಂಧವನ್ನು ರಚಿಸಿ ಅವರನ್ನು ಗ್ರಂಥದ ಮುನ್ನುಡಿಯಲ್ಲಿ ಕೊಂಡಾಡಿರುವರು. ಶ್ರೀಮತಿ ಎಂಬ ಮಹಿಳೆಯು ಇವರ ಶಿಷ್ಯತ್ವವನ್ನು ಸ್ವೀಕರಿಸಿ ಶ್ರಾವಕಿಯರ ಉನ್ನತಿಗಾಗಿ ದುಡಿದರು.

ಉತ್ತರ ಅಮೆರಿಕದ ಜೈನ ಸಂಘಗಳ ಒಕ್ಕೂಟದ ಅಧ್ಯಕ್ಷ ಡಿ. ಸುಲೇಖ್ ಚಂದ್ ಜೈನರವರು ಉಲ್ಲೇಖಿಸಿರುವಂತೆ ಲ್ಯುಬೆಕನ ಜೈನ ಗ್ರಂಥಾಲಯವು ವಿಶೇಷವಾಗಿ ಜೈನ ಸಮಾಜದ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಜೈನ ಡೈಜೆಸ್ಟ್, ಜೈನಸ್ಟಡಿ ಸರ್ಕ್ಯಲರ ಮತ್ತು ಜಿನಮಂಜರಿ ಪುರವಣಿಗಳು ಅಮೇರಿಕದಲ್ಲಿ ನೆಲೆಸಿರುವ ಜೈನಸಮುದಾಯದಲ್ಲಿ ನವಜಾಗ್ರತಿಯನ್ನು ಮೂಡಿಸುತ್ತಿವೆ.

ಅಮೇರಿಕ ನಿವಾಸಿಗಳಾಗಿರುವ ಆಚಾರ್ಯ ಮುನಿಶ್ರೀ ಸುಶೀಲಕುಮಾರ ಜೀ, ಗುರುದೇವ ಮತ್ತು ಚಿತ್ರಭಾನು ಮೊದಲಾದ ಧರ್ಮ ಧುರೀಣರು ಜೈನ ಧರ್ಮೀಯರನ್ನಲ್ಲದೆ ಜೈನೇತರನ್ನು ಜಿನಧರ್ಮದತ್ತ ಸೆಳೆಯಲೆತ್ನಿಸಿರುವರು. ಶ್ರೀ ಸುಶೀಲ್ ಕುಮಾರ ಜೀ ಯವರು ಸಂಸ್ಥಾಪಿಸಿರುವ ಶ್ರೀ ಮಹಾವೀರ ಜೈನ್ ಮಿಷನ್ನಿನ ಚಟುವಟಿಕೆಗಳು ಇತರರಿಗೆ ಮಾದರಿಯಾಗಿವೆ. ದಶಲಕ್ಷಣ ಪರ್ವ (ಪರ್ಯೂಷಣ)ದ ಆಚರಣೆಯನ್ನಂತೂ ವಿಧಿವತ್ತಾಗಿ ಭಕ್ತಿ ಭಾವ ಪರವಶತೆಯಿಂದ ಕೈಗೊಳ್ಳುತ್ತಾ ಬಂದಿರುವರು. ಜೈನ ಮತಾವಲಂಬಿಗಳ ಮನೆಮನೆಗಳಲ್ಲಿ ಣಮೋಕಾರ ಮಂತ್ರ ಪಠಣ ,ಆರತಿ ಮತ್ತು ಭಜನೆಗಳು ಸದಾ ನಿನದಿಸುತ್ತಿರುತ್ತವೆ. ೧೯೮೫ರಂದಿನ ಆಚರಣೆಯಲ್ಲಿ ಓರ್ವ ಶ್ರಾವಕಿಯಂತೂ ಹದಿನೆಂಟು ದಿನಗಳ ಕಾಲ ಕೇವಲ ಜಲಪಾನ ಮಾಡಿ ಉಪವಾಸ ವ್ರತವನ್ನು ಕೈಗೊಂಡಿದ್ದುದುಂಟು. ಅಷ್ಟಾಹಿನಿಕ, ಅಷ್ಟಮಿ ಮತ್ತು ಚತುರ್ದಶಿಗಳನ್ನೂ ಆಚರಿಸುವದರೊಂದಿಗೆ ದಶಲಕ್ಷಣಪರ್ವದ ಹತ್ತೂ ದಿನಗಳು ಉಪವಾಸ ವ್ರತವನ್ನು ಕೈಗೊಳ್ಳುವರು. ಸಿನ್ಸಿನಟಿ ಮತ್ತು ಡೇಟನ್ನ್ ಜೈನ ಕೇಂದ್ರಗಳವರೂ ಪರ್ಯೂಷಣಪರ್ವವನ್ನು ನಿರಂತರವಾಗಿ ಆಚರಿಸಿಕೊಂಡು ಬರುತ್ತಿರುವರು. ಬ್ರಾಹ್ಮಿಸಂಘ ಮತ್ತು ವಾಷಿಂಗಟನ್ ಡಿ.ಸಿ.ಯ ಜೈನಸಂಘವು ಧಾರ್ಮಿಕ ಕ್ರಿಯೆಯಲ್ಲಿ ಮುಂದಿವೆ.

ಬೆಂಗಳೂರಿನ ಶ್ರೀ ವರ್ಧಮಾನ ಭಾರತೀಯ ನಿರ್ದೇಶಕರಾದ ಪ್ರೊ॥ಪ್ರತಾಪ್ ಕುಮಾರ ತೋಲಯಾ ಅವರು ತಮ್ಮ ನಾಲ್ಕನೇಯ ಬಾರಿಯ ವಿದೇಶ ಪ್ರವಾಸದಲ್ಲಿ "ಕಲ್ಪಸೂತ್ರ"ವನ್ನು ವಾಚನಗೈದಿದ್ದರು. ಹಿಂದಿ, ಗುಜರಾತಿ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಪ್ರಶ್ನೋತ್ತರಗಳಾಗಿದ್ದವು. ಶ್ರೀಯುತರ ಕುಮಾರಿ ಕಿನ್ನರಿಯವನ್ರಿಂದ ಜೈನ ಕಥೆಗಳನ್ನಾಧರಿಸಿದ ನೃತ್ಯ ಕಾರ್ಯಕ್ರಮವೂ ಏರ್ಪಟ್ಟಿದ್ದಿತ್ತು. ಇವರಿರ್ವರನ್ನು ಎರಡು ನಗರಗಳ ಕೇಂದ್ರಗಳು ಹೃದಯಡ್ ತುಂಬಿ ಸನ್ಮಾನಿಸಿದ್ದುವು. ಅಲ್ಲದೆ ಕ್ಯಾಲಿಫೋರ್ನಿಯಾ ಮತ್ತು ನ್ಯೂಯಾರ್ಕ್ ಮೊದಲಾದೆಡೆಗಳಲ್ಲಿಯೂ ಧಾರ್ಮಿಕ ಉಪನ್ಯಾಸಗಳಾದವು. ಲ್ಯೂನಾಮನ 'ಜೈನ ಮ್ಯಾರೇಜ್ ಇನ್ಫರಮೆಶನ್ ಕೇಂದ್ರವು ' ವೈವಾಹಿಕ ಮಾಹಿತಿಗಳನ್ನು ಸಂಗ್ರಹಿಸಿ ಒದಗಿಸಿ ನೆರವಾಗುವುದರಲ್ಲಿ ಮುಂದಿದೆ. ಲುಬೆಕ್ನ 'ಜೈನ ಲೈಬ್ರರಿಯು'

ಅಮೂಲ್ಯವಾದ ಜೈನ ಗ್ರಂಥಗಳನ್ನು ಒಳಗೊಂಡಿದ್ದರೆ, ನ್ಯೂಯಾರ್ಕಿನ ಎ.ಎಂ.ಎಸ್. ಮುದ್ರಣಾಲಯವು ಜೈನ ಧಾರ್ಮಿಕ ಪುಸ್ತಕಗಳನ್ನು ಪ್ರಕಟಿಸುವುದರಲ್ಲಿ ಆಸಕ್ತಿಯನ್ನು ತೋರಿದೆ. ಡಾ॥ಅರವಿಂದ ಶಾ ಎಂಬುವರು ಜೈನ ಧರ್ಮಾಧ್ಯಯನಕ್ಕಾಗಿ ವಿದ್ಯಾರ್ಥಿ ವೇತನವನ್ನು ಪಡೆದಿದ್ದರೆ, ಹಾರ್ವರ್ಡ್ ವಿಶ್ವವಿದ್ಯಾಲಯವು ಜಾಗತಿಕ ಧರ್ಮಗಳ ಅಧ್ಯಯನ ಕೇಂದ್ರದಿಂದ ಜಾನ್ ಕಾರ್ಟ್ ಮತ್ತು ಪಾಲ್ ಕ್ಯುಷಿಫೆರಿಯವರಿಗೆ ಜೈನ ಧರ್ಮಾಧ್ಯಯನಕ್ಕಾಗಿ ಡಾಕ್ಟರೇಟ್ ಪದವಿಗಳನ್ನು ಪ್ರಧಾನ ಮಾಡುವುದರ ಮೂಲಕ ಗೌರವಿಸಿದೆ. ಲಾಸಾಂಜೆಲಿಸ್ ನ ಡೈರೆಕ್ಟ ಸಿನಿಮಾ ಲಿಮೆಟೆಡ್ ಕಂಪನಿಯು "ಅಹಿಂಸಾ–ನಾನ್ ವಯಲೆನ್ಸ್' ಮತ್ತು ನ್ಯೂಜೆರ್ಸಿಯ ದಿ ವಿಷುಯಲ್ ನಾಲೆಡ್ಜ್ ಕಾರ್ಪೋರೇಷನ್ ಸಂಸ್ಥೆಯು 'ದಿ ಫ್ರಾನ್ಸಿಯರ್ ಆಫ್ ಪೀಸ್: ಜೈನಿಸಮ ಇನ್ ಇಂಡಿಯಾ" ಎಂಬ ಧ್ವನಿ ಸುರುಳಿಗಳನ್ನು ಹೊರತಂದಿವೆ. "ಜೈನ ಡೈಜೆಸ್ಟ್ "ಪತ್ರಿಕೆಯ ಸಂಪಾದಕರಾಸ್ದ ಎಸ್.ಎ. ಭುವನೇಂದ್ರಕುಮಾರ್ ಅವರು ಉತ್ತರ ಅಮೇರಿಕಾದಲ್ಲಿರುವ ಜೈನ್ ಸಂಘ– ಸಂಸ್ಥೆಗಳ ವಿವರಗಳನ್ನುಳ್ಳ ಡೈರಕ್ಟರಿಯೊಂದರಸ್ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶ್ರೀಯುತರು ದಿಗಂಬರ ಜೈನ ಸಾಹಿತ್ಯವನ್ನು ಅಭ್ಯಾಸ ಮಾಡಿ ಬಾಹುಬಲಿ ಜೀವನ ಚರಿತ್ರೆಯನ್ನು ಸಂಸ್ಕೃತದಿಂದ ಇಂಗ್ಲೀಷಿಗೆ ಅನುವಾದಿಸಿದರು. ಅವರು 'ಬ್ರಾಹ್ಮೀ ಸೊಸೈಟಿ'ಯ ಕಾರ್ಯದರ್ಶಿಯಾಗಿ ಹೆಸರಾಂತರು. ಇಲ್ಲಿನ ಟ್ರಾಯ್ ನಗರದಲ್ಲಿ ಪಂಪ ಕನ್ನ ಡ ಬಳಗವು ಆದಿಕವಿ ಪಂಪನ ಹೆಸರಿನಲ್ಲಿ ಕನ್ನ ಡ ಶಾಲೆಯನ್ನು ನಡೆಸುತ್ತಿರುವುದು ಕನ್ನಡಿಗರಿಗೆ ಅಭಿಮಾನದ ಸಂಗತಿಯಾಗಿದೆ. ಇದು ಅಲ್ಲಿನ ಇತರ ಭಾರತೀಯರೂ ಕನ್ನ ಡ ಭಾಷಾಧ್ಯಯನದಲ್ಲಿ ತೊಡಗುವಂತೆ ಮಾಡಿದೆ.

ಜುಲೈ ೧೯೮೫ರಲ್ಲಿ ಬ್ರಿಟನ್ನಿನ ಡ್ ಕೇಂಬ್ರಿಜ್ ವಿಶ್ವವಿದ್ಯಾಲಯದ ಶಾಸ್ತ್ರ ವಿಭಾಸ್ಗವು ಜೈನಧರ್ಮದ ತಿರುಳಾದ ಅಹಿಂಸೆ ಮತ್ತು ಜೈನ ಸಮಾಜ ವಿಷಯ ಕುರಿತು ಅಸಂಖ್ಯಾತ ಸಮಾಜಸ್ ವಿಜ್ಞಾನಿಗಳು ಭಾಗವಹಿಸಿದ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಸಂಘಟಿಸಿದ್ದಿತ್ತು. ಒಹಾಯೋ ನಗರಸ್ದ ಜೈನಸ್ ಸಮಾಜವು ಪ್ರಕಾಶ'ನ–ವಿತರಣಾ ಕಾರ್ಯವನ್ನು ಕೈಗೊಂಡಿದೆ. ಹೊನಲೂಲ–ಹವ್ಯಾ ನಗರದಿಂದ ೨೫– ೭–೧೯೭೨ ರಂದು ಶ್ರೀಮತಿ ಲಿಯೊನಾ ಸ್ಮಿತ್ ಕ್ರೆಮ್ಸ್ ಎಂಬ ಮಹಿಳೆಯು ಮೈಸೂರಿನವ್ ಮಾನ್ಯ ಶ್ರೀ ಸಿ.ಬಿ.ಎಂ. ಚಂದ್ರಯ್ಯನವರಿಗೆ ಬರೆದ ಪತ್ರವೊಂದರಲ್ಲಿ ತಾನು ಜೈನ ಧರ್ಮದ ತತ್ವಗಳನ್ನು ನಿಷ್ಠೆಯಿಂದ ಪಾಲಿಸುತ್ತಿರುವುದಾಗಿಯೂ ಮತ್ತು ವಾರಕ್ಕೆ ಒಂದು ದಿನ ನೀರನ್ನು ಹೊರತಾಡ್ಗಿ ಮತ್ತೇನನ್ನೂ ಸೇವಿಸದೆ ಉಪವಾಸ ವ್ರತವನ್ನು ಕೈಗೊಳ್ಳುತ್ತಿರುವುದಾಗಿಯೂ ಉಲ್ಲೇಖಿಸಿರುವರು.

ವ್ಯಾಖ್ಯಾನಕೇಸರಿ ದಿವಂಗತ ಶ್ರೀ ಎ.ಆ ರ್ .ನಾಗರಾಜ್ ಅವರು ಡಿಸೆಂಬರ್ ೧೯೮೯ರಲ್ಲಿ ವಿದೇಶ ಯಾತ್ರೆ ಕೈಗೊಂಡ ಅವಧಿಯಲ್ಲಿ ಅಮೇರಿಕದ ಸೈಡಲ್ ನಗರದ ಭಾರತೀಯ ಸಮುದಾಯವು ಏರ್ಪಡಿಸಿದ್ದ ಕಾರ್ಯಕ್ರಮವೊಂದರಲ್ಲಿ 'ಕರ್ನಾಟಕ ಸಂಸ್ಕೃತಿ ಮತ್ತು ಸಾಹಿತ್ಯ' ಬಗ್ಗೆ ,ನ್ಯೂ ಆರ್ಲಿಯನ್ಸ್ ನಲ್ಲಿ ಸಂಕ್ರಾತಿ ಹಬ್ಬದಂದು ಮತ್ತು ಪಿಟ್ಸ್ ಬರ್ಗನ ಹಿಂದೂ ಜೈನ ದೇವಾಲಯದಲ್ಲಿ 'ಜೈನಧರ್ಮ ಹಾಗೂ ಶ್ರೀಮಾನ ತುಂಗಾಚಾರ್ಯ ಮತ್ತು ಭಕ್ತಾಮರಸ್ತೋತ್ರದಸ್' ಮಹತ್ವವನ್ನು ಕುರಿತು ಉಪನ್ಯಾಸಗಳನ್ನು ನೀಡಿದ್ದರು. ಸುಮಾರು ೬೦೦ ಸದಸ್ಯರನ್ನು ಹೊಂದಿರುವ ನ್ಯೂಯಾರ್ಕ್,ಡೇಲವಾರೆ ಮತ್ತು ಪೆನಿಸಿಲ್ ವೇನಿಯಾ ರಾಜ್ಯಗಳ ಕನ್ನಡಿಗರ ಸಂಘವಾದ ಖ್ಯಾತ ತ್ರಿವೇಣಿ ಕನ್ನ ಡ ಕೂಟದಲ್ಲಿ 'ಕನ್ನ ಡ ಸಾಹಿತ್ಯ ಮತ್ತು ಧಾರ್ಮಿಕ ಪರಂಪರೆ'ಯನ್ನು ಕುರಿತು ವಿದ್ವತ್ ಪೂರ್ಣ ಭಾಷಣವನ್ನು ಮಾಡಿದರು.

ಮೈಸೂರಿನ ಶ್ರೀ ರೋಬೆರ್ತ್ಜ್ಯೆಯ್ದನ್ ಬೋಸ ರವರು ಜೈನಪೂಜಾ ಪದ್ಧತಿಯ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಅವರು ೧೯೯೧ರಲ್ಲಿ ಫ್ರಾನ್ಸ್ ನಲ್ಲಿ ನಡೆದ ಭಕ್ತಿ ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಿಯಾರಾದ ಶ್ರೀ ಪದ್ಮಾವತಿ ದೇವಿ ಮತ್ತು ಶ್ರೀ ಜ್ವಾಲಾಮಾಲಿನಿ ದೇವಿ ಕುರಿತ ಸಾಹಿತ್ಯಕೃತಿಗಳ ಬಗ್ಗೆ ಮಾತನಾಡಿದರು.

ಕೆನಡಾ ದೇಶದ ಟೊರೆಂಟೋವಿನ ಜೈನ ಸೊಸೈಟಿಯು ದೈನಂದಿನ ಪೂಜೆ ಪುನಸ್ಕಾರಗಳ ವ್ಯವಸ್ಥೆಯನ್ನಲ್ಲದೆ ಪ್ರತಿವರುಷವೂ ತಪ್ಪದೆ ಶ್ರೀ ಮಹಾವೀರ ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದೆ ಹಾಗೂ ಧಾರ್ಮಿಕ ಶಿಕ್ಷಣ ತರಬೇತಿಯನ್ನು ನೀಡುತ್ತಿದೆ. ಇದರ ಆಶ್ರಯದಲ್ಲಿ ವಿನ್ ಸೆಂಟ್ ಮ್ಯಾಸ್ಸಿ ಕೋಲೋಜಿಯೇಟ್ ಇನ್ಸ್ಟಿಟ್ಯೂಟನಲ್ಲಿ ಪೂಜೆ, ಆರತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರುತ್ತಿರುತ್ತಿವೆ. ೧೯೮೫ರಲ್ಲಿ ಬಹುಪಾಲು ಮಕ್ಕಳೇ ಅಭಿನಯಿಸಿದ "ಶೀಲಭದ್ರ" ನಾಟಕವು ಬಹು ಮೆಚ್ಚುಗೆಯನ್ನು ಗಳಿಸಿದ್ದಿತು. ರೆಸ್ಟಾನ್ ನಗರದ ಜೈನ ಸಮಾಜವು ತಿಂಗಳಿಗೊಮ್ಮೆ ಚರ್ಚಾಗೋಷ್ಠಿ, ವಿದ್ವಾಂಸರಿಂದ ಉಪನ್ಯಾಸವನ್ನ ಲ್ಲದೆ ಸ್ವಾಧ್ಯಾಯದ ಮಹತ್ವವನ್ನು ಮನಗಂಡು ಜೈನಧರ್ಮದ ಅಧ್ಯಯನವನ್ನು ಕೈಗೊಳ್ಳುತ್ತಿದೆ; ಜೈನಸಾಹಿತ್ಯ ಭಂಡಾರವನ್ನೂ ನಿರ್ಮಿಸಿದೆ. ಇಂಗ್ಲೇಂಡಿನ ಬರ್ಮಿಂಗ್ ಹ್ಯಾಂ ನಗರದ ಹ್ಯಾಮ್ ಸ್ಟೆಡ್ ರಸ್ತೆಯಲ್ಲಿರುವ ಜೈನ ಆಶ್ರಮದಲ್ಲಿ ಭಗವಾನ್ ಶ್ರೀ ಮಹಾವೀರ ಜಯಂತಿ ಹಾಗೂ ನಿರ್ವಾಣ ಮಹೋತ್ಸವ ಮತ್ತು ದಶಲಕ್ಷಣಪರ್ವವನ್ನು ವಿಧಿವತ್ತಾಗಿ ಆಚರಿಸಿ ಕೊಂಡು ಬರಲಾಗುತ್ತಿದೆ.

೧೯೮೮ರಲ್ಲಿ ಸಂಕಲ್ಪಗೊಂಡು ಡಿಸೆಂಬರ್ ೧೯೮೯ರಂದು ಕೆನಡಾ ಮತ್ತು ಅಮೇರಿಕವ್ ದೇಶಗಳೆರಡರಲ್ಲಿಯೂ ಹಲವಾರು ಕೂಡಿ ಸಮಕಾಲೀನ ಪರಿಸರದಲ್ಲಿ ತನ್ನದೆ ಆದಂತಹ ವಿಶಿಷ್ಟ ಕೊಡುಗೆಯನ್ನು ನೀಡುವ ಉದ್ದೇಶದಿಂದ ಬ್ರಾಹ್ಮಿ ಸೊಸೈಟಿಯೆಂಬ ಸಂಸ್ಥೆಯನ್ನು ಹುಟ್ಟು ಹಾಕಿದರು.

**DER JAINPFAD (jaina path)** ಎಂಬ ಜರ್ಮನ್ ಪತ್ರಿಕೆಯನ್ನು ಶ್ರೀ ಮಾರ್ಕಸ್ ಮೊಸ್ನರ್ ಎಂಬುವರು ಪಶ್ಚಿಮ ಜರ್ಮನಿಯ ಹಿರಿಂಗನ್ ಎಂಬಲ್ಲಿ ಸಂಪಾದಿಸಿ ಪ್ರಕಟಿಸುತ್ತಿರುವವರು. ಇಟಲಿಯಲ್ಲಿ ಪ್ರಕಟಗೊಳ್ಳುವಸ್ **(Gente)** ಎಂಬ ಪತ್ರಿಕೆಯು ೧೯೮೧ರಲ್ಲಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ನೆರವೇರಿದ ಸಾವಿರ ವರುಷದ ಶ್ರೀ ಗೋಮಟೇಶ್ವರ ಮಹಾಮಸ್ತಕಾಭಿಷೇಕದ ಸವಿವರ ಸುಚಿತ್ರ ವರದಿಯನ್ನು ಸಾರವತ್ತಾಗಿ ಬಣ್ಣಿಸಿದೆ.

ವೀರಸೇವಾದಳಸ್ದ ಅಧ್ಯಕ್ಷ ಡಾ॥ಧನಂಜಯ ದುಂಡೆ ಅವರು ತಮ್ಮ ಸಿಂಗಾಪೂರ, ಬಾಂಕಾಕ್ ಮತ್ತು ಕೀನ್ಯಾ ದೇಶಗಳ ಪ್ರವಾಸಕಾಲದಲ್ಲಿ ನೈರೋಬಿ ಮತ್ತು ಮೊಂಬಾಸ್ ನಗರಗಳಲ್ಲಿ ಸುಮಾರು ೩೫೦ ಮಂದಿ ಭಾಗವಹಿಸಿದ್ದ ಯೋಗಶಿಬಿರಗಳನ್ನು ನಡೆಸಿ ಮಧ್ಯಪಾನ –ಧೂಮಪಾನ ಮುಂತಾದ ದುಶ್ಚಟಗಳಿಂದ ದೂರವಾಗುವ ವಿಧಾನವನ್ನು ಮನಗಾಣಿಸಿರುವರು.

ಶ್ರೀಲಂಕಾದಲ್ಲಿನ ವಿಶ್ವವಿದ್ಯಾಲಯವೊಂದರ ಅಧ್ಯಾಪಕರಾಗಿರುವ ಸುನಿಲ್ ಗುಣಶೇಖರ್ ಅವರು ಜೈನ ಧರ್ಮದ ಸಂಪ್ರದಾಯಗಳನ್ನು ಅಭ್ಯಸಿಸಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿಯನ್ನು ಪಡೆದಿರುವರು.

ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಶ್ರೀ ಮಹಾವೀರನ ೨೫೦೬ನೇಯ ಜಯಂತಿಯನ್ನು ನೇಪಾಳ ಜೈನವ್ ಪರಿಷತ್ ನಲ್ಲಿ ಬಹು ಭವ್ಯವಾಗಿ ಆಚರಿಸಲಾಗಿ ರಾಷ್ಟ್ರದ ಪ್ರಧಾನೊಇ, ವಿಶ್ವ ಹಿಂದೂ ಧರ್ಮ ಸಂಘದ ಅಧ್ಯಕ್ಷ ಶ್ರೀ ನಾಗೇಂದ್ರ ಪ್ರಸಾದ್ ರಿಜಾಲ್, ರಾಯಲ್ ನೇಪಾಲ್ ಅಕಾಡೆಮಿ ಆಫ್ ಸೈನ್ಸ್ ಮತ್ತು ಟೆಕ್ನಾಲಜಿಯ ಮುಖ್ಯಸ್ಥರಾಗಿದ್ದ ಕಿಶನ್ ಲಾಲ್ ಮೊದಲಾದವರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ವರದಿಯು ಅಲ್ಲಿನ ಆಕಾಶವಾಣಿ ಮತ್ತು ದೂರದರ್ಶನ ಸಮೂಹ ಮಾಧ್ಯಮಗಳಲ್ಲಿಯೂ ಬಿತ್ತರಗೊಂಡಿದ್ದಿತು. ಧೂಲ್ ರಾಟಿ ಎಂಬಲ್ಲಿಯೂ ಭಗವಾನ್ ಶ್ರೀ ಮಹಾವೀರನ ಜನ್ಮ ದಿನವನ್ನು ಆಚರಿಸಲಾಗಿದ್ದಿತು. ಇಂಟರ್ ನ್ಯಾಶನಲ್ ಜೈನ ಫ್ರೇಂಡ್ಸ್ ನ ಒಬ್ಬ ಸದಸ್ಯ , ನೇಪಾಲಿ ಯುವಕ ಶ್ರೀ ಅರುಣಕುಮಾರಂ ಸಿಂಹರು ನೇಪಾಳದ ಜನಕಪುರ ಧಾಮದಲ್ಲಿ ಜೈನ ಸ್ಥಾಪಿಸಿದ್ದಾರೆ.

ಹಾಲಿವುಡ್ ನ ಪ್ರಸಿದ್ದ ಮಾಯಕೆಲ ತೊಬಿಯಾಸ, ಜರ್ಮನಿಯ ಪ್ರಸಿದ್ದ ಹಾಸ್ಯಾಭಿನೇತೃ ಡಿವಟರ್ ಹಾಲರವಾರ್ಡನ್, ಪ್ರಸಿದ್ದ ವಿದ್ವಾಂಸ ಕುರ್ತಲೆತಜೆ ಹಾಗೂ ಫ್ರಾನ್ಸಸ್ ಕೂಲಿಕಾರಾಧಿಕಾರಿ ಪಿಯರ್ ಮಿವಲ ಅವರು ಜೈನ ಧರ್ಮಾನುಯಾಯಿಗಳಾಗಿದ್ದಾರೆ.

ಹೊಂಬುಜ ಕ್ಷೇತ್ರದ ಶ್ರೀಗಳಾದ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯರು ಹತ್ತಾರುಬಾರಿ ವಿದೇಶಿ ಪ್ರವಾಸಗಳನ್ನು ಕೈಗೊಂಡು ಜಿನಸಂದೇಶವನ್ನು ಪ್ರಚಾರಮಾಡಿದ್ದಾರೆ. ೧೯೯೮ರಂದು ಮಾಂಟ್ರಿಯಾಲ್ (ಕೆನಡಾ), ಸಿಂಗಾಪುರ,ಹಾಂಕಾಂಗ್, ಚಿಕಾಗೊ, ಲಾಸ್ ಗಟೋಸ್, ನ್ಯೂಜೆರ್ಸಿ, ನ್ಯೂಯಾರ್ಕ್, ಫ್ಲಾರಿಡಾ, ಓರ್ಲಾಂಡೊ, ಪಿಟ್ಸಬರ್ಗ, ಡೆಟ್ರಾಯಿಟ್ ಮತ್ತ ಟೊರಾಂಟೋಗಳಲ್ಲಿ ಪ್ರವಚನಗಳನ್ನು ನೀಡಿದ್ದಾರೆ. ಅಮೇರಿಕದಡ್ ಸ್ಯಾನ್ ಫ್ರಾನ್ಸಿಸ್ಕೋ ಮಹಾನಗರದಲ್ಲಿ ಜಿನಮಂದಿರಕ್ಕೆ ಶಿಲಾನ್ಯಾಸವನ್ನು ನೆರವೇರಿಸಿದ್ದಾರೆ. ಡೆಟ್ರಾಯಿಟನ ಜಿನಮಂದಿರದಲ್ಲಿ ಶ್ರೀ ಆದಿನಾಥ, ಶ್ರೀ ಮಹಾವೀರ ಶ್ರೀ ಪಾರ್ಶ್ವನಾಥ, ಶ್ರೀ ಚಕ್ರೇಶ್ವರಿ ,ಶ್ರೀ ಪದ್ಮಾವತಿ ಮತ್ತು ಶ್ರೀ ಸರಸ್ವತಿ ದೇವತಾ ಪ್ರತಿಷ್ಠಾಪನೆ ನೆರವೆರಿಸಲಿದ್ದಾರೆ. ಅಲ್ಲದೆ ನ್ಯೂಜೆರ್ಸಿ ಪ್ರಾಂತ್ಯದ ನಾರ್ತ ಬರ್ಗೆನ್ ನಗರದಲ್ಲಿ ನೂತನ ಜಿನಮಂದಿರ ನಿರ್ಮಿಸಲು ಸ್ವಾಮೀಜಿ ಅವರು ಸೂಕ್ತ ಭೂಮಿಕೆಯನ್ನು ನಿರ್ಮಿಸಿದ ರು.

ಆಚಾರ್ಯ ಶ್ರೀ ತುಳಸಿಯವರ ಶಿಷ್ಯರು ಮತ್ತು ಮುನಿಶ್ರೀ ಅಭಯ ಚಂದ್ರ ವಿಜಯಾಜಿ ಮೊದಲಾದವರು ಜೈನ ಧ್ಯಾನ ಮತ್ತು ಜೈನ ಯೋಗ ಕುರಿತು ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡುತ್ತಲಿರುವರು.

ಜೈನ ಸಮ್ಮೇಳನಗಳು

ಅಂತಾರಾಷ್ಟ್ರೀಯ ಜೈನ ಸಮ್ಮೇಳನಗಳು

ಉತ್ತರ ಅಮೆರಿಕೆಯ ಜೈನ ಸಂಘಸಂಸ್ಥೆಗಳ ಒಕ್ಕೂಟವು ಪ್ರತಿ ಎರಡು ವರ್ಷಗಳಿಗೊಮ್ಮೆ ಅಂತಾರಾಷ್ಟ್ರೀಯ್ ಜೈನ ಸಮಾವೇಶಗಳನ್ನು ನಡೆಸಿಕೊಂಡು ಬರುತ್ತಿದೆ. ನ್ಯೂಯಾರ್ಕ್ ಮಹಾನಗರದಲ್ಲಿ ಆಚಾರ್ಯ ಶ್ರೀ ಸುಶೀಲ್ ಕುಮಾರ ಜೀಯವರ ಮಾರ್ಗದರ್ಶನದಲ್ಲಿ ಅಕ್ಟೋಬರ್ ೧೯೮೧ರ ಮೊದಲ ವಾರದಲ್ಲಿ ಪ್ರಪ್ರಥಮ ಅಂತಾರಾಷ್ಟ್ರೀಯ ಜೈನ ಸಮ್ಮೇಳವನವು ನೆರವೇರಿತು. ಭಾರತ, ಅಮೆರಿಕ, ಕೆನಡಾ ಮತ್ತು ಇಂಗ್ಲೆಂಡ ದೇಶಗಳಲ್ಲಿ ಅಹಿಂಸಾ ಧರ್ಮ ಪ್ರಾಭಾವನೆಯಲ್ಲಿ ನಿರತವಾಗಿರಿವ ಅನೇಕ ಸಂಘಸಂಸ್ಥೆಗಳಲ್ಲ ಶ್ರಮವಹಿಸಿ ಸಂಘಟಿಸಿದ್ದ ಈ ಸಮ್ಮೇಳನದ್ದಲ್ಲಿ ಜೈನಧರ್ಮದ ಬಗ್ಗೆ ವಿಸ್ತೃತ ಒಲವು–ನಿಲವು–ಗೆಲುವು ಒಮ್ಮತದಿಂದ ವ್ಯಕ್ತಗೊಂಡವು. ದ್ವಿತೀಯ ಸಮ್ಮೆಳನವು ಬ್ರಿಟನ್ನಿ ನ ರಾಜಧಾನಿ ಲಂಡನ್‌ನಲ್ಲಿ

೧೯೮೩ರಲ್ಲಿ ನೆರವೇರಲು ಮುಕ್ತಾಯ ಸಮಾರಂಭದಲ್ಲಿ ಸುಮಾರ ೨೦೦೦ ಪ್ರತಿನಿಧಿಗಳು ಭಾಗವಹಿಸಿದ್ದರು. ತೃತೀಯ ಸಮ್ಮೇಳವು ೮,೯,೧೦ ಫೆಬ್ರುವರಿ ೧೯೮೫ ರಂದು ನವದೆಹಲಿಯಲ್ಲಿ ಅಹಿಂಸಾ ಇಂಟರ್‌ನ್ಯಾಷನಲ್ ಸಂಸ್ಥೆಯ ಸಹಯೋಗದೊಂದಿಗೆ ಸಾಹು ಶ್ರೀ ಶ್ರೇಯಾಂಸ ಪ್ರಸಾದ್ ಜೈನ್‌ರವರ ಮುಖ್ಯ ಸಂರಕ್ಷಕತ್ವದಲ್ಲಿ ಸಮಾವೇಶಗೊಂಡಿದ್ದಿತು. ಇದರಲ್ಲಿ ಸುಮಾರು ೫೦೦ ಪ್ರತಿನಿಧಿಗಳು. ಕೊಲ್ಹಾಪುರದ ಶ್ರೀ ಲಕ್ಷೀಸೇನ ಭಟ್ಟಾರಕ್ಕ ಸ್ವಾಮಿಗಳು, ಮುನಿಶ್ರೀ ಅಭಯ ಚಂದ್ರ ವಿಜಯಾಜಿ ಮಹಾರಜ್ ಮತ್ತು ಡಾ|| ನಾಗರಾಜ್ ಮೊದಲಾದವರು ಆಗಮಿಸಿದ್ದರು. ಕರ್ಮಯೋಗಿ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಮಾರ್ಗದರ್ಶಕರಾಗಿದ್ದರು. ಚತುರ್ಥ ಸಮ್ಮೇಳನವು ಅಮೆರಿಕಯ ಚಿಕಾಗೋ ನಗರದಲ್ಲಿ ೧೩-೨೫ಮೇ ೧೯೮೭ ರಂದು ಏರ್ಪಟ್ಟಿದ್ದಿತು. ಇದರಲ್ಲಿ ಕೊಲ್ಹಾಪುರದ ಶ್ರೀ ಲಕ್ಷ್ಮಿಸೇನ ಭಟ್ಟಾರಕ ಸ್ವಾಮಿಗಳು ಮತ್ತು ಹೊಂಬುಜದ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮಿಗಳು ಪಾಲ್ಗೊಂಡಿದ್ದರು. ಷಷ್ಠೀ ಸಮ್ಮೇಳನವು ಅಮೆರಿಕದ ಪಶ್ಚಿಮ ಪೆಸಿಫಿಕ್ ಕರಾವಳಿಯ ಪ್ರಸಿದ್ಧ ಸ್ಥಳವಾದ ಉತ್ತರ ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್ಕೋನ ಸಾಟ್ಯನ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ೪-೭-೧೯೯೧ ರಿಂದ ೬-೭-೧೯೯೧ ರವರೆಗೆ ನೆರವೇರಿತು. ಮುಂದಿನ ಪೀಳಿಗೆಗೆ ಜೈನ ಪರಂಪರೆಯ ಮುದುವರಿಕೆ ಎಂಬುದು ಸಮ್ಮೇಳನದ ಧ್ಯೇಯವಾಕ್ಯ ವಾಗಿದ್ದಿತು. ಈ ಸಮ್ಮೇಳನದಲ್ಲಿ ಧರ್ಮತತ್ವರರೂ, ಹಿರಿಯ ಶ್ರಾವಕರು ಮತ್ತು ಜನಾನುರಾಗಿಗಳಾದ ಮಂಗಳೂರಿನ ಶ್ರೀ ಎನ್.ಡಿ. ಬಲ್ಲಾಳರು ಭಾಗವಹಿಸಿ ಶೋಭೆ ತಂದಿತ್ತರು. ಸಪ್ತಮಿ ಸಮ್ಮೇಳನವು ಪಿಟ್ಸಬರ್ಗ್ ಮಿಚಿಗನ್‌ನ ಫಾರ್ಮಿಂಗ್ ಬೆಟ್ಟದಲ್ಲಿ ಏಪ್ರಿಲ್ ೧೯೯೩ರಂದು ನೆರವೇರಿತು.

**ವಿಶ್ವಧರ್ಮ ಮತ್ತು ಶಾಂತಿ ಸಮ್ಮೇಳನಗಳು (World Conference of Religion For Peace: WCRP)**

ಇಲ್ಲಿಯವರೆಗೆ ಐದು ಜಾಗತಿಕ ಧರ್ಮ ಶಾಂತಿ ಸಮ್ಮೇಳನಗಳು ಜರುಗಿವೆ. ಪ್ರಮುಖವಾಗಿ ಮೂರನೇಯ ಜಾಗತಿಕ ಸಮ್ಮೇಳನವು ೧೯೭೯ರಲ್ಲಿ ಅಮೆರಿಕದ ಪ್ರಿನ್ಸ್ ಟನ್ ನಗರದಲ್ಲಿ ನೆರವೇರಿದ್ದಿತು. ನೈರೋಬಿಯಾದಲ್ಲಿ ನಾಲ್ಕನೇಯ ಸಮ್ಮೇಳನವು ಸೆಪ್ಟೆಂಬರ್ ೧೯೮೪ರಲ್ಲಿ ಜರುಗಲು ಶ್ರವಣಬೆಳಗೊಳ ಮಠದ ಕರ್ಮಯೋಗಿ ಶ್ರೀ ಚಾರುಕೀರ್ತಿ ಭಟ್ಟಾಕರ್ ಸ್ವಾಮಿಗಳವರು ಭಾರತವನ್ನು ಪ್ರತಿನಿಧಿಸಿ ಪಂಚನಮಸ್ಕಾರ ಮಂತ್ರ ಮತ್ತು ಪೂರ್ವಾಚಾರ್ಯರ ವಿಶ್ವ ಶಾಂತಿ ಶ್ಲೋಕಗಳ ಪಠನದೋಂದಿಗೆ ಸಮ್ಮೇಳನವು ಕೆನಡಾದ ಟೊರೆಂಟೊದಲ್ಲಿ ೧ ರಿಂದ ೩ ಜೂಲೈ ೧೯೮೮ರವರೆಗೆ ಜರುಗಲು, ಅಮೆರಿಕ ,ಕೆನಡ, ಭಾರತ ಮತ್ತು ಯೂರೋಪ್ ರಾಷ್ಟ್ರಗಳಿಂದ ಸುಮಾರು ೩೦೦೦ ಪ್ರತಿನಿಧಿಗಳು ಪಾಲ್ಗೋಂಡಿದ್ದರು.

ಕೊಲ್ಹಾಪುರದ ಶ್ರೀ ಲಕ್ಷ್ಮಿಸೇನ ಭಟ್ಟಾರಕರು, ಹೊಂಬುಜ ಜೈನ ಮಠದ ಪರಮಪೂಜ್ಯ ಶ್ರೀಮದ್ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕರು ಹಾಗೂ ಮೂಡಬಿದರೆಯ ಜ್ಞಾನಯೋಗಿ ಶ್ರೀ ಚಾರುಕೀರ್ತಿ ಭಟ್ಟಾರಕರು ಆಗಮಿಸಿದ್ದರು. ಅಲ್ಲಿನ ನೂತನ ಜೈನ  ಬಸದಿ ಮತ್ತು ಪಂಚಕಲ್ಯಾಣ ಮಹೋತ್ಸವದ ನೇತೃತ್ವಡ್  ವಹಿಸಿದ್ದರು.

ಏಷ್ಯನ್ ರಾಷ್ಟ್ರಗಳ ಧರ್ಮ  ಮತ್ತು ಶಾಂತಿ ಸಮ್ಮೇಳನಗಳು **(Asian Conference of Religion For peace : ACRP ):**

೧೯೭೬ರ ನವೆಂಬರ್ ತಿಂಗಳಿನಲ್ಲಿ ಸಿಂಗಪುರದಲ್ಲಿ ನೆರವೇರಿದ ಪ್ರಥಮ ಮಹಾಸಮ್ಮೇಳನದಲ್ಲಿ ಭಾರತದ ಜೈನ ಧರ್ಮದ ಪ್ರತಿನಿಧಿಯಾಗಿ ಶ್ರವಣಬೆಳಗೊಳದ ಶ್ರೀಗಳವರು ಭಾಗವಹಿಸಿದ್ದರು. ೧೭ ರಾಷ್ಟ್ರಗಳಸ್ ವಿವಿಧ ಧರ್ಮಗಳ ಸುಮಾರು ೩೦೦ ಪ್ರತಿನಿಧಿಗಳು ಪಾಲ್ಗೊಂಡಿದ್ದು 'ಧರ್ಮದ ಮ್ಾಊಲಕ ಶಾಂತಿ" ಎಂಬ ಸಂದೇಶ್ವನ್ನು ಎಲ್ಲೇಡೆ ಬಿತ್ತಿಸಲಾಯಿತು. ದ್ವಿತೀಯ ಸಮ್ಮೇಳನವು ೭–೧೧ ನವೆಂಬರ್ ೧೯೮೧ ರಂದು ನವದೆಹಲಿಯಲ್ಲಿ ಸಮಾಡ್ವೇಶಗೊಳ್ಳಲು, ಜಪಾನ್,. ಕೊರಿಯಾ, ಚೀನಾ, ಫಿಲಿಫೈನ್ಸ್, ಇಂಡೋನೇಷಿಯಾ, ಫಿಜಿ, ಥಾಯ್ ಲ್ಯಾಂಡ್, ಸಿಂಗಪೂರ್, ಶ್ರೀಲಂಕಾ, ಬಾಂಗ್ಲಾದೇಶ್, ನೇಪಾಳ, ಪಾಕಿಸ್ತಾಡ್ನ ಮತ್ತು ಮಾರಿಷಸ್ ದೇಶಗಳ ೨೧೪ ಪ್ರತಿನಿಧಿಗಳಲ್ಲದೆ ಜರ್ಮನಿ, ಅಮೆರಿಕಡ್ ಮತ್ತು ರಷಿಯಾ ದೇಶಗಳ ೧೯ ವೀಕ್ಷಕರಿದ್ದರು. ಭಾಡ್ರತದಿಂದ ಭಾಗವಹಿಸಿದ್ದ ೫೭ ಸದಸ್ಯರ ಪೈಕಿ ೮ ಜನರು ಜೈನಧರ್ಮಿಯರಾಗಿದ್ದರು. ಪ್ರಾರಂಭದಲ್ಲಿ ಶ್ರವಣಬೆಳಗೋಳದ ಶ್ರೀಗಳವರು ಸಮಸ್ತರನ್ನು ಸ್ವಾಗತಿಸಿದರು. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರಸ್ ಹೆಗ್ಗಡೆಯವರ ಪರವಾಗಿ ಅವರ ಸಹೋದರ ಶ್ರೀ ಹರ್ಷೇಂದ್ರ ಕುಮಾರ, ದೆಹಲಿ ಆಕಾಶವಾಣಿಯ ಶ್ರೀ ಧರ್ಮರಾಜ್, ಮುಂಬೈನ "ಮಾರ್ಗ ಪ್ರಕಾಶನ"ದ ಸಡ್ಮಾದಕಿ ಶ್ರೀಮತಿ ಸರಯೂ ದೋಷಿ ಮತ್ತು ಮುನಿಶ್ರೀ ಸುಶೀಲ ಕುಮಾರಜಿ ಮೊದಲಾದವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ತೃತೀಯ ಸಮ್ಮೇಳನವು ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲನಲ್ಲಿ ೧೬–೨೧ ಜೂನ್ ೧೯೮೬ರಲ್ಲಿ ನೆರವೇರಲು, ವಿಶೇಷಡ್ ಆಹ್ವಾನಿತರಾಗಿದ್ದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರುಅ ಉದ್ಘಾಟನಾ ಸಮಾರಂಭದಲ್ಲಿ 'ಭಾರತೀಯ ಧರ್ಮಗಳು ಏಶಿಯಾದಲ್ಲಿ ಶಾಂತಿಯ ಸೇತುವೆಗಳು' ಎಂಬ ವಿಷಯಸ್ ಕುರಿತು ಪ್ರಧಾನ ಭಾಷಣ ಮಾಡಿದ್ದರು. ಸುಮಾರು ೧೨ ದೇಶಗಳ ನೂರಾರು ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಪಶ್ಚಿಮ ಜರ್ಮನಿಯ ಉಲ್ಸ್-ನ್ಯೂ-ಉಲ್ಸ್ ನಲ್ಲಿ ೨೨-೨೬ ಜೂಲೈ ೧೯೮೨ ರಂದು ೨೬ನೇಯ ಶಾಕಾಹಾರಡ್ ಸಮ್ಮೇಳನವು ಜರುಗಿತು.

ಭೂತಾನ್ ಬೌದ್ದ ಸಮ್ಮೇಳನ

ರಾಜಧಾನಿ ಥಿಂಪುವಿನಲ್ಲಿ ಭೂತಾನ್ ಬೌದ್ದ ಪರಿಷತ್ತಿನವರು ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಧರ್ಮ ಸಮ್ಮೇಳನದಲ್ಲಿ ಹೊಂಬುಜ ಜೈನಡ್ ಪೀಠದ ಶ್ರೀ ದೇವೇಂದ್ರಸ್ ಕೀರ್ತಿ ಭಟ್ಟಾರ್ಕ ಸ್ವಾಮಿಗಳವರುಅಡ್ ಪಾಲ್ಗೊಂಡು ಸತ್ಯ, ಅಹಿಂಸೆ, ಶಾಂತಿ, ಪ್ರೀತಿ ಮತ್ತು ಸೌಹಾರ್ದತೆಯನ್ನು ಬೆಳೆಸಿಕೊಂಡು ಸ್ವಧರ್ಮ ಪ್ರೇಮ ಮತ್ತು ಪರಧರ್ಮ ಸಹಿಷ್ಣುತೆಯನ್ನು ಟೋರಬೇಕೆಂದು ಕರೆಯಿತ್ತರು.

ಏಷ್ಯನ್ ಸ್ಟಡೀಸ್ ಅಂತಾರಾಷ್ಟ್ರೀಯ ಸಮ್ಮೇಳನ

ಟೊರೆಂಟೋ ವಿಶ್ವವಿದ್ಯಾಲಯದಲ್ಲಿ ಆಗಸ್ಟ್ ೧೯೯೦ ರಂದು ನೆರವೇರಿದ ಸಮ್ಮೇಳನದಲ್ಲಿ ಖ್ಯಾತ ಸಾಹಿತಿ ಡಾ॥ಹಂಪ. ನಾಗರಾಜಯ್ಯನವರು ಭಾಗವಹಿಸಿ ಜೈನಸಾಹಿತ್ಯದಲ್ಲಿ ಚಾರುದತ್ತನ ಬೆಳವಣಿಗೆ ಎಂಬ ವಿಷಯವಾಗಿ ವಿಶೇಷ ಪ್ರಬಂಧವನ್ನು ಮಂಡಿಸಿದರು. ೧೯೯೭ರಲ್ಲಿ ಶ್ರೀಯುತರು ಹಂಗೇರಿಯ ಬುಡಾಪೆಸ್ಟ್ ನಲ್ಲಿ ನೆರವೇರಿದ ಅಂತಾರಾಷ್ಟ್ರೀಯ ಸಮಾವೇಶದಲ್ಲಿಯೂ ವಿಶೇಷ ಉಪನ್ಯಾಸವಿತ್ತರು.

ಆಧುನಿಕ ವೈಜ್ಞಾನಿಕ ಹಾಗೂ ಯಾಂತ್ರಿಕ ಬದುಕಿನಡ್ ಪರಿಸರದಲ್ಲಿ ಜೈನಧರ್ಮವು ತನ್ನ ವೈಚಾರಿಕ ತತ್ವಗಳು ಮತ್ತು ಸಿದ್ದಾಂತದಿಂದ ಭಾರತದಲ್ಲಲ್ಲದೆ ಸಾಗರೋತ್ತರವಾಗಿಯೂ ಅಹಿಂಸಾಜ್ಯೋತಿಯನ್ನು ಹರಡುತ್ತಿರುವುದು ಅದರ ಚಿರಂತನ ಜೀವಂತಿಕೆಯಡ್ ಮೆರುಗಾಗಿರುವುದು.

'ತೀರ್ಥವಂದನೆ' ಸ್ಮರಣ ಸಂಚಿಕೆ, ನವೆಂಬರ್ ೧೯೯೧

ಅತಿಶಯದ ಮಹನೀಯ ಶ್ರೀ ಸಿ.ಬಿ.ಎಂ. ಚಂದ್ರಯ್ಯ

೨೨-೧೦-೧೯೯೧ರ ಮುಂಜಾನೆ ಎಂಟು ಗಂಟೆ ಸಮಯ: ಸಮಾಜದ ಹಿರಿಯ ಚೇತನ ಮತ್ತು ಮಹಾನ್ ಮುತ್ಸದ್ದಿ, ಗೌರವಾನ್ವಿತ ಮೈಸೂರಿನ ನಿವಾಸಿ ಸಿ.ಬಿ.ಎಂ. ಚಂದ್ರಯ್ಯನವರು ಸ್ಥಳೀಯ ಖಾಸಗಿ ಶುಶ್ರೂಷಾಲಯ (ಕಿರಣ್ ನರ್ಸಿಂಗ್ ಹೋಂ) ದಲ್ಲಿ ಕಾಲವಶರಾದ ವಾರ್ತೆಯು ಕೆಲವೇಡ್ ಕ್ಷಣಗಳಲ್ಲಿ ಅಸಂಖ್ಯಾತ ಬಂಧು ಮಿತ್ರರು ಹಿತೈಷಿಗಳ ಹಾಗೂ ಅಭಿಮಾನಿಗಳ ಬಳಗಗಳಿಗೆ ತಲುಪಿ ದು:ಖದ ಮಡುವಿಗೆ ದೂಡಿದ ದುರ್ಭರ ಘಳಿಗೆ. ಮತ್ತೆಂದೂ ಮರಳಿಬಾರದ ಮರೆಯಲಾಗುದ ಕಮರಿಹೋದ ನಿಷ್ಠಾವಂತ ವ್ಯಕ್ತಿಯ ಅಗಲಿಕೆಯು ತುಂಬಲಾರದ ನಷ್ಟವೆಂದು ಬಣ್ಣಿಸಿದರೆ ಕೇವಡ್ಲಡ್ ಕ್ಲೀಷೆಯೆನಿಸದು (ಜನನ್:೧೯-೧-೧೯೧೪).